# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ 30.04.2022ರ ಶನಿವಾರದಂದು ಪೂರ್ವಾಹ್ನ 11–30 ಗಂಟೆಗೆ ಜರುಗಿದ ಸಿಂಡಿಕೇಟ್‌ನ ನಾಲ್ಕನೇ ಸಾಮಾನ್ಯ ಸಭೆಯ ನಡವಳಿಗಳು.

**<u>ಹಾಜರಿದ್ದ ಸದಸ್ಯರುಗಳು:</u>**

| | | |
|---|---|---|
| 1. | ಪ್ರೊ. ಜಿ.ಹೇಮಂತಕುಮಾರ್ | ಕುಲಪತಿಗಳು ಹಾಗೂ ಅಧ್ಯಕ್ಷರು |
| 2. | ಶ್ರೀ ಕೆ.ಸಿ.ವೀರಭದ್ರಯ್ಯ<br>ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ,<br>ಪ್ರಾದೇಶಿಕ ಕಛೇರಿ, ಮೈಸೂರು.<br>ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ<br>ಸರ್ಕಾರ ಇವರ ಪರವಾಗಿ | ಸದಸ್ಯರು |
| 3. | ಡಾ. ಜಿ.ವೆಂಕಟೇಶ್ ಕುಮಾರ್(ಆನ್‌ಲೈನ್) | ಸದಸ್ಯರು |
| 4. | ಪ್ರೊ. ರಮೇಶ್ | ಸದಸ್ಯರು |
| 5. | ಶ್ರೀ ಎಂ.ಬಿ. ಗಪ್ಪಣ್ಣ | ಸದಸ್ಯರು |
| 6. | ಡಾ. ಚೈತ್ರ ನಾರಾಯಣ | ಸದಸ್ಯರು |
| 7. | ಡಾ. ವೆಂಕಟೇಶಯ್ಯ | ಸದಸ್ಯರು |
| 8. | ಡಾ. ನಾಗರಾಜು | ಸದಸ್ಯರು |
| 9. | ಡಾ. ಗೋವಿಂದರಾಜು | ಸದಸ್ಯರು |
| 10. | ಶ್ರೀ ಆರ್.ಪ್ರದೀಪ್ ಕುಮಾರ್ ದೀಕ್ಷಿತ್ | ಸದಸ್ಯರು |
| 11. | ಶ್ರೀ ಎಸ್.ಡಿ.ದೊಡ್ಡಚಾರಿ | ಸದಸ್ಯರು |
| 12. | ಶ್ರೀಮತಿ ವೈ.ಕೆ.ಪವಿತ್ರ | ಸದಸ್ಯರು |
| 13. | ಡಾ. ಈ.ಸಿ.ನಿಂಗರಾಜ್ ಗೌಡ | ಸದಸ್ಯರು |
| 14. | ಡಾ. ಎಂ.ಎಸ್.ದಾಮೋಧರ | ಸದಸ್ಯರು |
| 15. | ಡಾ. ಸೈಯದ್ ಕಾರ್‍ಝು ಮೊಹಿದ್ದೀನ್(ಆನ್‌ಲೈನ್) | ಸದಸ್ಯರು |
| 16. | ಪ್ರೊ. ಎ.ಪಿ.ಜ್ಞಾನಪ್ರಕಾಶ್<br>ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 17. | ಪ್ರೊ. ಆರ್.ಶಿವಪ್ಪ | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ |
| 18. | ಡಾ. ಸಂಗೀತಾ ಗಜಾನನ ಭಟ್, ಹಣಕಾಸು ಅಧಿಕಾರಿಗಳು | ವಿಶೇಷ ಆಹ್ವಾನಿತರು |

**<u>ಹಾಜರಾಗದ ಸದಸ್ಯರು:</u>**

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ಡಾ. ಕೆ.ವಿ.ಸುರೇಶ, ಜೆ.ಎಸ್.ಎಸ್. ಮಹಿಳಾ ಕಾಲೇಜು, ಸರಸ್ವತಿಪುರಂ, ಮೈಸೂರು.
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸಭೆಗೆ ಹಾಜರಿದ್ದ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸಭೆಗೆ ಸ್ವಾಗತಿಸಿದರು ಹಾಗೂ ಆನ್‌ಲೈನ್ ಮುಖಾಂತರ ಹಾಜರಾಗಿದ್ದ ಪ್ರೊ. ಜಿ. ವೆಂಕಟೇಶ್ ಕುಮಾರ್ ಮತ್ತು ಡಾ. ಸೈಯದ್ ಕಾಝು ಮೊಹಿದ್ದೀನ್ ರವರನ್ನು ಸಹ ಸ್ವಾಗತಿಸಿದರು. ಮುಂದುವರೆದು ಸಿಂಡಿಕೇಟ್ ಸದಸ್ಯರಾಗಿರುವ ಪ್ರೊ.ರಮೇಶ್‌ರವರ ಕಾನೂನು ನಿಕಾಯದ ಡೀನ್ ಅವಧಿಯು ಇಂದಿನ ಸಭೆಗೆ ಪೂರ್ಣಗೊಳ್ಳುತ್ತಿದೆ ಎಂದು ಸಭೆಯ ಗಮನಕ್ಕೆ ತಂದರು.

ನಂತರ ಮಾನ್ಯ ಕುಲಪತಿಗಳು ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸಭೆಗೆ ಸ್ವಾಗತಿಸಿದ ನಂತರ ಕಾರ್ಯಸೂಚಿಯನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು.

**<u>ಪೂರ್ವಭಾವಿ ಕಾರ್ಯಸೂಚಿ</u>**

<table>
<tr><th>ವಿಷಯ ಸಂಖ್ಯೆ</th><th>ವಿಷಯ ಸಂಕ್ಷಿಪ್ತವಾಗಿ</th></tr>
<tr><td colspan="2">ದಿನಾಂಕ : 16-03-2022ರಂದು ಜರುಗಿದ "ಎರಡನೇ ಸಾಮಾನ್ಯ ಸಿಂಡಿಕೇಟಿನ ಸಭೆ"ಯ ನಡವಳಿಯನ್ನು ದೃಢೀಕರೀಸುವ ಬಗ್ಗೆ. ಹಾಗೂ<br>ದಿನಾಂಕ : 29-03-2022ರಂದು ಜರುಗಿದ "ಮೂರನೇ ಸಾಮಾನ್ಯ ಸಿಂಡಿಕೇಟಿನ ಸಭೆ"ಯ ನಡವಳಿಯನ್ನು ದೃಢೀಕರಿಸುವ ಬಗ್ಗೆ.</td></tr>
<tr><td>ತೀರ್ಮಾನ</td><td>ದಿನಾಂಕ : 16-03-2022ರಂದು ಜರುಗಿದ "ಎರಡನೇ ಸಾಮಾನ್ಯ ಸಿಂಡಿಕೇಟಿನ ಸಭೆ"ಯ ನಡವಳಿ ಹಾಗೂ ದಿನಾಂಕ: 29-03-2022ರಂದು ಜರುಗಿದ "ಮೂರನೇ ಸಾಮಾನ್ಯ ಸಿಂಡಿಕೇಟಿನ ಸಭೆ"ಯ ನಡವಳಿಯನ್ನು ದೃಢೀಕರಿಸಲಾಯಿತು.</td></tr>
<tr><td>ಸಾಮಾನ್ಯ ಸಭೆ 2022/1.21</td><td>ಅತಿಥಿ ಉಪನ್ಯಾಸಕರ ನೇಮಕಾತಿ ಹಾಗೂ ಬೋಧನಾ ಕಾರ್ಯಭಾರ ಹಂಚಿಕೆಯ ಬಗ್ಗೆ.</td></tr>
<tr><td></td><td>
<table>
<tr><th>ತೀರ್ಮಾನ</th><th>ತಿದ್ದುಪಡಿ ತೀರ್ಮಾನ</th></tr>
<tr><td>ಶ್ರೀ ಪ್ರದೀಪ್ ಕುಮಾರ್ ದೀಕ್ಷಿತ್ ರವರು ಮಾತನಾಡಿ ಹಿಂದಿನ ಮೊದಲ ಸಭೆಯಲ್ಲಿ ಚರ್ಚಿಸಲೆಂದು ಕಾರ್ಯಸೂಚಿಗೆ ವಿಷಯವನ್ನು ನೀಡಲಾಗಿತ್ತು. ಆದರೆ ಅದರ ಉಲ್ಲೇಖವೇ ಆಗಿಲ್ಲ. ಅದೇ ಶೀರ್ಷಿಕೆಯಡಿಯಲ್ಲಿ ಬೇರೆ ವಿಚಾರಗಳು ಪ್ರಸ್ತಾಪವಾಗಿದೆ ಎಂದು ತಿಳಿಸಿದರು. ಮುಂದುವರೆದು ಅತಿಥಿ ಉಪನ್ಯಾಸಕರ ನೇಮಕಾತಿ ಹಾಗೂ ಬೋಧನಾ ಕಾರ್ಯಭಾರದ ಹಂಚಿಕೆ ವಿಚಾರವಾಗಿ ಹಿಂದಿನ ಮೊದಲನೇ ಸಭೆಯಲ್ಲಿ 4 ಗಂಟೆಗಳಂತೆ ಬೋಧನಾ ಕಾರ್ಯಭಾರವನ್ನು ಹಲವರಿಗೆ ಹಂಚಿಕೆ ಮಾಡಲಾಗಿದೆ. ಅರ್ಹತೆ ಇಲ್ಲದ ಆನೇಕರಿಗೂ ಬೋಧನಾ ಕಾರ್ಯವನ್ನು ನೀಡಲಾಗಿದೆ ಅದರ ಬದಲು ಅದೇ ವಿಷಯದಲ್ಲಿ ನೇಮಕಗೊಂಡ ಕಡಿಮೆ ಅವಧಿ ನಿರ್ವಹಿಸುವ</td><td>ಶ್ರೀ ಪ್ರದೀಪ್ ಕುಮಾರ್ ದೀಕ್ಷಿತ್ ರವರು ಮಾತನಾಡಿ ಹಿಂದಿನ ಮೊದಲ ಸಭೆಯಲ್ಲಿ ಚರ್ಚಿಸಲೆಂದು ಕಾರ್ಯಸೂಚಿಗೆ ವಿಷಯವನ್ನು ನೀಡಲಾಗಿತ್ತು. ಆದರೆ ಅದರ ಉಲ್ಲೇಖವೇ ಆಗಿಲ್ಲ. ಅದೇ ಶೀರ್ಷಿಕೆಯಡಿಯಲ್ಲಿ ಬೇರೆ ವಿಚಾರಗಳು ಪ್ರಸ್ತಾಪವಾಗಿದೆ ಎಂದು ತಿಳಿಸಿದರು. ಮುಂದುವರೆದು ಅತಿಥಿ ಉಪನ್ಯಾಸಕರ ನೇಮಕಾತಿ ಹಾಗೂ ಬೋಧನಾ ಕಾರ್ಯಭಾರದ ಹಂಚಿಕೆ ವಿಚಾರವಾಗಿ ಹಿಂದಿನ ಮೊದಲನೇ ಸಭೆಯಲ್ಲಿ 4 ಗಂಟೆಗಳಂತೆ ಬೋಧನಾ ಕಾರ್ಯಭಾರವನ್ನು ಹಲವರಿಗೆ ಹಂಚಿಕೆ ಮಾಡಲಾಗಿದೆ. ಅರ್ಹತೆ ಇಲ್ಲದ ಆನೇಕರಿಗೂ ಬೋಧನಾ ಕಾರ್ಯವನ್ನು ನೀಡಲಾಗಿದೆ ಅದರ ಬದಲು ಅದೇ ವಿಷಯದಲ್ಲಿ ನೇಮಕಗೊಂಡ ಕಡಿಮೆ ಅವಧಿ ನಿರ್ವಹಿಸುವ</td></tr>
</table>
</td></tr>
</table>

<table>
<tr><td></td><td>ಬೋಧಕರಿಗೆ ಹೆಚ್ಚುವರಿಯಾಗಿ ನೀಡಿದ್ದಲ್ಲಿ ಅವರಿಗೂ ಅನುಕೂಲವಾಗುತ್ತದೆ ಇದನ್ನು ಸರಿಪಡಿಸಬೇಕಾಗಿದೆ ಎಂದು ಮನವಿ ಮಾಡಿದರು.<br>ಮಾನ್ಯ ಕುಲಪತಿಯವರು ಇದಕ್ಕೆ ಪ್ರತಿಕ್ರಿಯಿಸುತ್ತಾ, ಈ ವಿಷಯವನ್ನು ಮುಂಬರುವ ಸಭೆಯಲ್ಲಿ ಸವಿವರವಾಗಿ ಚರ್ಚಿಸಿ ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು.</td><td>ಬೋಧಕರಿಗೆ ಹೆಚ್ಚುವರಿಯಾಗಿ ನೀಡಿದ್ದಲ್ಲಿ ಅವರಿಗೂ ಅನುಕೂಲವಾಗುತ್ತದೆ ಇದನ್ನು ಸರಿಪಡಿಸಬೇಕಾಗಿದೆ ಎಂದು ಮನವಿ ಮಾಡಿದರು.<br>ಮಾನ್ಯ ಕುಲಪತಿಯವರು ಮುಂದೆ ಅತಿಥಿ ಉಪನ್ಯಾಸಕರುಗಳಿಗೆ ಕಾರ್ಯಭಾರವನ್ನು ಹಂಚಿಕೆ ಮಾಡುವಾಗ ಪರಿಗಣಿಸಲಾಗುವುದು.</td></tr>
<tr><td rowspan="2">ಇತರೆ ವಿಷಯಗಳು-2</td><td>ತೀರ್ಮಾನ</td><td>ತಿದ್ದುಪಡಿ ತೀರ್ಮಾನ</td></tr>
<tr><td>ಶ್ರೀ ಆರ್. ಪ್ರದೀಪ್‌ಕುಮಾರ್ ದೀಕ್ಷಿತ್‌ರವರು ಮಾತನಾಡಿ, ಸಿಂಡಿಕೇಟ್ ಸಭೆಗೆ ಘನತೆಯಿದೆ ಎಂದು ಹೇಳುತ್ತೀರಾ, ನಮಗೆ ನಿಖರವಾದ ಮಾಹಿತಿ ಲಭ್ಯವಾಗುತ್ತಿಲ್ಲ. ಅಸ್ಪಷ್ಟವಾದ ಮಾಹಿತಿ ನಮಗೆ ಲಭ್ಯವಾಗುತ್ತಿದೆ, ತಾವು ನಮಗೆ ಕೊಡುವಂತಹ ಮಾಹಿತಿ ಆಧಾರದ ಮೇಲೆ ನಾವು ಚರ್ಚಿಸಿ ಒಪ್ಪಿಗೆ ಕೊಡುವುದು ಮಾಡುತ್ತೇವೆ. ನಮಗೆ ಪೂರ್ವಾಪರವೇನೂ ತಿಳಿದಿರುವುದೇ ಇಲ್ಲ, ಇಲ್ಲಿ ಬೇಕಾದಷ್ಟು ನ್ಯೂನತೆಗಳು ಎದ್ದು ಕಾಣುತ್ತಿವೆ ಕೆಲವು ವಿಷಯಗಳನ್ನು ತಕ್ಷಣಕ್ಕೆ ಕೊಡುತ್ತೀರ, ಆ ಸಮಯದಲ್ಲೆ ಚರ್ಚೆಮಾಡಿ ತೀರ್ಮಾನ ತೆಗೆದುಕೊಳ್ಳಲು ಆಗುವುದಿಲ್ಲವೆಂದು ತಿಳಿಸಿದರು.</td><td>ಶ್ರೀ ಆರ್. ಪ್ರದೀಪ್‌ಕುಮಾರ್ ದೀಕ್ಷಿತ್‌ರವರು ಮಾತನಾಡಿ, ಸಿಂಡಿಕೇಟ್ ಸಭೆಗೆ ಘನತೆಯಿದೆ ಎಂದು ಹೇಳುತ್ತೀರಾ, ನಮಗೆ ನಿಖರವಾದ ಮಾಹಿತಿ ಲಭ್ಯವಾಗುತ್ತಿಲ್ಲ. ಅಸ್ಪಷ್ಟವಾದ ಮಾಹಿತಿ ನಮಗೆ ಲಭ್ಯವಾಗುತ್ತಿದೆ, ತಾವು ನಮಗೆ ಕೊಡುವಂತಹ ಮಾಹಿತಿ ಆಧಾರದ ಮೇಲೆ ನಾವು ಚರ್ಚಿಸಿ ಒಪ್ಪಿಗೆ ಕೊಡುವುದು ಮಾಡುತ್ತೇವೆ. ನಮಗೆ ಪೂರ್ವಾಪರವೇನೂ ತಿಳಿದಿರುವುದೇ ಇಲ್ಲ, ಆ ಕ್ಷಣದಲ್ಲಿ ಸ್ಪಷ್ಟತೆ ಇಲ್ಲದ ಮಾಹಿತಿ ನೀಡಲಾಗುತ್ತಿದೆ. ಇಲ್ಲೆ ಬೇಕಾದಷ್ಟು ನ್ಯೂನತೆಗಳು ಎದ್ದು ಕಾಣುತ್ತಿವೆ ಕೆಲವು ವಿಷಯಗಳನ್ನು ತಕ್ಷಣಕ್ಕೆ ಕೊಡುತ್ತೀರ, ಆ ಸಮಯದಲ್ಲೆ ಚರ್ಚೆಮಾಡಿ ತೀರ್ಮಾನ ತೆಗೆದುಕೊಳ್ಳಲು ಆಗುವುದಿಲ್ಲವೆಂದು ತಿಳಿಸಿದರು.</td></tr>
<tr><td>ಸಾಮಾನ್ಯ ಸಭೆ 2022/4.1</td><td colspan="2">ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಲ್ಲಿ ಯಾವುದಾದರೂ ಕಾಲೇಜಿಗೆ ಭಾರತದ ರಕ್ಷಣಾ ಸಿಬ್ಬಂದಿ ಜನರಲ್ ಮುಖ್ಯಸ್ಥ ಬಿಪಿನ್ ರಾವತ್‌ರವರ ಹೆಸರನ್ನು ಇಡುವುದರ ಬಗ್ಗೆ.</td></tr>
<tr><td></td><td colspan="2">ಮಾನ್ಯ ಕುಲಪತಿಯವರು ಮಾತನಾಡಿ, ವಿಶ್ವವಿದ್ಯಾನಿಲಯದ ಘಟಕ ಕಾಲೇಜಿಗೆ ಭಾರತದ ರಕ್ಷಣಾ ಸಿಬ್ಬಂದಿ ಜನರಲ್ ಮುಖ್ಯಸ್ಥ ಬಿಪಿನ್ ರಾವತ್‌ರವರ ಹೆಸರಿಡುವುದು ಹೆಮ್ಮೆ ವಿಷಯವಾಗಿದೆ ಎಂದು ತಿಳಿಸಿದರು.<br><br>ಪ್ರೊ. ವೆಂಕಟೇಶ್ ಕುಮಾರ್ ರವರು ಮಾತನಾಡಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆತ್ತೂರು, ಸಕಲೇಶಪುರ ತಾಲ್ಲೂಕು, ಈ ಕಾಲೇಜಿಗೆ ಭಾರತದ ರಕ್ಷಣಾ ಸಿಬ್ಬಂದಿ ಜನರಲ್ ಮುಖ್ಯಸ್ಥ ಬಿಪಿನ್ ರಾವತ್‌ರವರ ಹೆಸರಿಡುವುದು ಸ್ವಾಗತಾರ್ಹ ಹಾಗೂ ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಲ್ಲಿ ಎನ್‌ಸಿಸಿ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಶಿಕ್ಷಣ ನೀತಿ-2020 ರ ಅಡಿಯಲ್ಲಿ ಕೌಶಲಾಭಿವೃದ್ಧಿ ಕೋರ್ಸ್‌ನಂತೆ ಸ್ನಾತಕ ಪದವಿಯಲ್ಲಿ ಎನ್‌ಸಿಸಿ ಕೋರ್ಸ್‌ನ್ನು ಪರಿಚಯಿಸಲು ಸಲಹೆ ನೀಡಿದರು.</td></tr>
</table>

| | |
|---|---|
| ತೀರ್ಮಾನ | ಭಾರತದ ರಕ್ಷಣಾ ಸಿಬ್ಬಂದಿ ಜನರಲ್ ಮುಖ್ಯಸ್ಥ ಬಿಪಿನ್ ರಾವತ್‌ರವರ ಹೆಸರನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆತ್ತೂರು, ಸಕಲೇಶಪುರ ತಾಲ್ಲೂಕು, ಇಲ್ಲಿಗೆ ನಾಮಾಂಕಿತಗೊಳಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2022/4.2 | AIMS Centre for Advanced Research Centre (A Unit of Acharya Institute of Management and Science), ಬೆಂಗಳೂರು ಇವರು ಹೆಚ್ಚುವರಿಯಾಗಿ Computer Science ವಿಷಯಕ್ಕೆ ಸಂಶೋಧನಾ ಮಾನ್ಯತೆ ಕೋರಿದ್ದ ಸಂಬಂಧ ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | AIMS Centre for Advanced Research Centre (A Unit of Acharya Institute of Management and Science), ಬೆಂಗಳೂರು ಇವರು ಹೆಚ್ಚುವರಿಯಾಗಿ Computer Science ವಿಷಯಕ್ಕೆ ಸಂಶೋಧನಾ ಮಾನ್ಯತೆ ಕೋರಿದ್ದ ಸಂಬಂಧ, ಸಂಸ್ಥೆಯಲ್ಲಿನ ಮೂಲಭೂತ ಸೌಲಭ್ಯಗಳು ಹಾಗೂ ಇತರೆ ಅಗತ್ಯ ಮಾಹಿತಿಗಳನ್ನು ಪರಿಶೀಲಿಸಿ, ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ನೀಡಿರುವ ವರದಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2022/4.3 | ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಚಾಮರಾಜನಗರ ಇಲ್ಲಿಗೆ ಕಬಿನಿ/ಕಾವೇರಿ ನೀರಿನ ಸಂಪರ್ಕ ಕಲ್ಪಿಸುವ ಬಗ್ಗೆ. |
| ತೀರ್ಮಾನ | ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕಾಯ್ದಿರಿಸಿ, ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಸುವರ್ಣ ಗಂಗೋತ್ರಿ, ಚಾಮರಾಜನಗರ ಇಲ್ಲಿಗೆ ಕಬಿನಿ/ಕಾವೇರಿಯ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸುವ ಕಾಮಗಾರಿಯನ್ನು ನಿಯಮಾನುಸಾರ ಕೈಗೊಳ್ಳಲು ಹಾಗೂ ಕಾಮಗಾರಿಯ ಅಂದಾಜು ವೆಚ್ಚ ರೂ.9,85,000=00ಗಳ ವೆಚ್ಚದಲ್ಲಿ ಸಹಾಯಕ ಕಾರ್ಯಪಾಲ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ಇಲಾಖೆ, ಚಾಮರಾಜನಗರ ಇವರ ಮುಖಾಂತರ ಕೈಗೊಳ್ಳಲು, ನಿರ್ದೇಶಕರು, ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಚಾಮರಾಜನಗರ ಇವರಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2022/4.4 | ಶಿಕ್ಷಕ ಸಲಹೆಗಾರರ ನೇತೃತ್ವದಲ್ಲಿ ನಡೆಯುತ್ತಿರುವ ವಿ.ವಿ. ವಿದ್ಯಾರ್ಥಿನಿಲಯಗಳ ಭೋಜನ ವ್ಯವಸ್ಥೆಯಲ್ಲಿ ದಿನಸಿ ಹಾಗೂ ತರಕಾರಿ ಪದಾರ್ಥಗಳಿಗೆ ಹೆಚ್ಚುವರಿಯಾಗಿ ಖರ್ಚಾಗಿರುವ ಮೊತ್ತದ ಬಗ್ಗೆ. |
| | ಶ್ರೀ ದೊಡ್ಡಚಾರಿಯವರು ಮಾತನಾಡಿ, ದಿನಸಿ ಹಾಗೂ ತರಕಾರಿ ಪದಾರ್ಥಗಳಿಗೆ ಹೆಚ್ಚುವರಿಯಾಗಿ ಖರ್ಚಾಗಿರುವ ಭೋಜನ ವೆಚ್ಚದ ಮೊತ್ತ ರೂ.28,35,760/- ಪಾವತಿಸಿರುವುದನ್ನು ಪ್ರಶ್ನಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಕೋವಿಡ್-19 ಹಿನ್ನೆಲೆ ಇದ್ದರೂ ಸಹ ವಿದ್ಯಾರ್ಥಿ ನಿಲಯವನ್ನು ಎಂದಿನಂತೆ ಮುಂದುವರೆಸಿಕೊಂಡು ಹೋಗಿದ್ದರಿಂದ ಭೋಜನಕ್ಕಾಗಿ ಹೆಚ್ಚುವರಿಯಾಗಿ ರೂ.28,35,760/- ಗಳನ್ನು ಪಾವತಿಸಲಾಗಿರುತ್ತದೆ ಎಂದು ತಿಳಿಸಿದರು. |

| | |
|---|---|
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ಮೈಸೂರು ನಗರ ವ್ಯಾಪ್ತಿಗೊಳಪಡುವ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿನಿಲಯಗಳಲ್ಲಿ ದಿನಸಿ ಹಾಗೂ ತರಕಾರಿ ಪದಾರ್ಥಗಳಿಗೆ ಹೆಚ್ಚುವರಿಯಾಗಿ ಖರ್ಚಾಗಿರುವ ಭೋಜನ ವೆಚ್ಚದ ಮೊತ್ತ ರೂ.28,35,760/-ಗಳನ್ನು ಪಾವತಿಸಿರುವ ಸಂಬಂಧ ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದಿಸಿತು. |
| ಸಾಮಾನ್ಯ ಸಭೆ **2022/4.5** | ಮೈಸೂರು ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಸ್ಥಾಪಿಸಲಾಗಿರುವ ಶ್ರೀ ಎನ್. ರಾಚಯ್ಯ ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಸ್ಥಾಪಿಸಲಾಗಿರುವ ಶ್ರೀ ಎನ್. ರಾಚಯ್ಯ ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಸಂಬಂಧ ಮೂವರು ಪ್ರಾಧ್ಯಾಪಕರಲ್ಲಿ ಒಬ್ಬರನ್ನು ನೇಮಕ ಮಾಡಿಕೊಳ್ಳುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ **2022/4.6** | ಮೈಸೂರು ವಿಶ್ವವಿದ್ಯಾನಿಲಯದ ರಸಾಯನಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಸ್ಥಾಪಿಸಲಾಗಿರುವ ಸರ್ ಎಂ. ವಿಶ್ವೇಶ್ವರಯ್ಯ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ರಸಾಯನಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಸ್ಥಾಪಿಸಲಾಗಿರುವ ಸರ್ ಎಂ. ವಿಶ್ವೇಶ್ವರಯ್ಯ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಸಂಬಂಧ ನೇಮಕ ಮಾಡಿಕೊಳ್ಳುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ **2022/4.7** | ಲೈಬ್ರರಿ ಪ್ರಾಜೆಕ್ಟ್ ಅಸಿಸ್ಟೆಂಟ್‌ಗಳ ಪದನಾಮವನ್ನು ಗ್ರಂಥಾಲಯ ಸಹಾಯಕರು (ತಾತ್ಕಾಲಿಕ) ಎಂದು ಪದನಾಮವನ್ನು ಬದಲಾವಣೆ ಮಾಡುವ ಬಗೆಗೆ. |
| | ಶ್ರೀ ಎಸ್. ಡಿ ದೊಡ್ಡಾಚಾರಿಯವರು ಮಾತನಾಡಿ, 2010 ರಿಂದ ಲೈಬ್ರರಿ ಪ್ರಾಜೆಕ್ಟ್ ಅಸಿಸ್ಟೆಂಟ್‌ಗಳು ಪ್ರಾಜೆಕ್ಟ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಕೆಲವು ಪ್ರಾಜೆಕ್ಟ್‌ಗಳು ಮುಗಿದು ಹೋಗಿದ್ದರೂ ಸಹ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಸಭೆಯ ಗಮನಕ್ಕೆ ತಂದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಪ್ರಾಜೆಕ್ಟ್ ಅಸಿಸ್ಟೆಂಟ್ ಎಂಬ ಪದನಾಮವಿದ್ದರೆ ಹೆಚ್ಚು ಅವಕಾಶಗಳು ದೊರೆಯುವುದಿಲ್ಲ ಎಂಬ ಕಾರಣಕ್ಕೆ ಗ್ರಂಥಾಲಯ ಸಹಾಯಕರು (ತಾತ್ಕಾಲಿಕ) ಎಂದು ಪದನಾಮ ಬದಲಾಯಿಸಿದರೆ ಅನುಕೂಲವಾಗುತ್ತದೆ. ಈ ಬಗ್ಗೆ ಒಂದು ಸಮಿತಿಯನ್ನು ಸಹ ರಚಿಸಲಾಗಿತ್ತು, ಸದರಿ ಸಮಿತಿಯ ಶಿಫಾರಸ್ಸಿನನ್ವಯ ಬದಲಾವಣೆ ಮಾಡಬಹುದೆಂದು ಸಭೆಯ ಗಮನಕ್ಕೆ ತಂದರು. |
| ತೀರ್ಮಾನ | ಗ್ರಂಥಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಲೈಬ್ರರಿ ಪ್ರಾಜೆಕ್ಟ್ ಅಸಿಸ್ಟೆಂಟ್‌ಗಳ ಪದನಾಮವನ್ನು ಗ್ರಂಥಾಲಯ ಸಹಾಯಕರು (ತಾತ್ಕಾಲಿಕ) ಎಂದು ಬದಲಾಯಿಸಿ, ಸೇವೆಯನ್ನು ಮುಂದುವರೆಸಲು ಸಮಿತಿಯು ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ **2022/4.8** | ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಡಾ. ಎಂ.ಕುಮಾರಸ್ವಾಮಿ, ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಅಧ್ಯಕ್ಷರ ಅವಧಿಯು ದಿನಾಂಕ 31.05.2022ಕ್ಕೆ ಮುಕ್ತಾಯಗೊಳ್ಳುವುದರಿಂದ, ಸದರಿ ಅಧ್ಯಯನ ವಿಭಾಗದ ಪ್ರಾಧ್ಯಾಪಕರ ಜೇಷ್ಠತೆಯಲ್ಲಿ ಹಿರಿಯರಾಗಿರುವ ಡಾ. ಅಶೋಕ್ |

| | |
|---|---|
| | ಎಂ.ಎಲ್, ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ 01.06.2022ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ವಿಶ್ವವಿದ್ಯಾನಿಲಯದ ಮುಂದಿನ ಆದೇಶದವರೆಗೆ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು. |
| **ಸಾಮಾನ್ಯ ಸಭೆ 2022/4.9** | ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಗೆ ನಿರ್ದೇಶಕರನ್ನು ನೇಮಕ ಮಾಡುವ ಬಗ್ಗೆ. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಪ್ರೊ. ಎಂ.ಜಿ.ಮಂಜುನಾಥ್, ನಿರ್ದೇಶಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರ ನಿರ್ದೇಶಕರ ಅವಧಿಯು ದಿನಾಂಕ 26.05.2022ಕ್ಕೆ ಮುಕ್ತಾಯಗೊಳ್ಳುವುದರಿಂದ, ಸದರಿ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರ ಜೇಷ್ಠತೆಯಲ್ಲಿ ಹಿರಿಯರಾಗಿರುವ ಪ್ರೊ. ವಿಜಯಕುಮಾರಿ ಎಸ್. ಕರಿಕಲ್, ಇವರನ್ನು ದಿನಾಂಕ 27.05.2022ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ವಿಶ್ವವಿದ್ಯಾನಿಲಯದ ಮುಂದಿನ ಆದೇಶದವರೆಗೆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು. |
| **ಸಾಮಾನ್ಯ ಸಭೆ 2022/4.10** | ಗಣಿತಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಡಾ. ಆರ್. ರಂಗರಾಜನ್, ಪ್ರಾಧ್ಯಾಪಕರು, ಗಣಿತ ಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಅಧ್ಯಕ್ಷರ ಅವಧಿಯು ದಿನಾಂಕ 31.05.2022ಕ್ಕೆ ಮುಕ್ತಾಯಗೊಳ್ಳುವುದರಿಂದ ಸದರಿ ಅಧ್ಯಯನ ವಿಭಾಗದ ಪ್ರಾಧ್ಯಾಪಕರ ಜೇಷ್ಠತೆಯಲ್ಲಿ ಹಿರಿಯರಾಗಿರುವ ಡಾ. ವಾಸುಕಿ ಕೆ.ಆರ್. ಇವರನ್ನು ದಿನಾಂಕ 01.06.2022ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ವಿಶ್ವವಿದ್ಯಾನಿಲಯದ ಮುಂದಿನ ಆದೇಶದವರೆಗೆ ಗಣಿತ ಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು. |
| **ಸಾಮಾನ್ಯ ಸಭೆ 2022/4.11** | ಭೂ ವಿಜ್ಞಾನ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಪ್ರೊ. ಮಾದೇಶ, ಪ್ರಾಧ್ಯಾಪಕರು, ಭೂ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಅಧ್ಯಕ್ಷರ ಅವಧಿಯು ದಿನಾಂಕ 14.05.2022ಕ್ಕೆ ಮುಕ್ತಾಯಗೊಳ್ಳುವುದರಿಂದ, ಸದರಿ ಅಧ್ಯಯನ ವಿಭಾಗದ ಪ್ರಾಧ್ಯಾಪಕರ ಜೇಷ್ಠತೆಯಲ್ಲಿ ಹಿರಿಯರಾಗಿರುವ ಡಾ. ಕೆ. ಎನ್. ಪ್ರಕಾಶ್ ನರಸಿಂಹ, ಇವರನ್ನು ದಿನಾಂಕ 15.05.2022ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ವಿಶ್ವವಿದ್ಯಾನಿಲಯದ ಮುಂದಿನ ಆದೇಶದವರೆಗೆ ಭೂ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು. |

| | |
|---|---|
| **ಸಾಮಾನ್ಯ ಸಭೆ 2022/4.12** | ಪರಿಸರ ವಿಜ್ಞಾನ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಪ್ರೊ. ಎನ್. ಎಸ್. ರಾಜು, ಪ್ರಾಧ್ಯಾಪಕರು, ಪರಿಸರ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಅಧ್ಯಕ್ಷರ ಅವಧಿಯು ದಿನಾಂಕ 19.05.2022ಕ್ಕೆ ಮುಕ್ತಾಯಗೊಳ್ಳುವುದರಿಂದ, ಸದರಿ ಅಧ್ಯಯನ ವಿಭಾಗದ ಪ್ರಾಧ್ಯಾಪಕರ ಜೇಷ್ಠತೆಯಲ್ಲಿ ಹಿರಿಯರಾಗಿರುವ ಡಾ. ಈ. ವಿ. ವೆಂಕಟರಮಣ, ಇವರನ್ನು ದಿನಾಂಕ 20.05.2022ರಿಂದ ಅನ್ವಯವಾಗುವಂತೆ ಎರಡು ವರ್ಷಗಳ ಅವಧಿಗೆ ಅಥವಾ ವಿಶ್ವವಿದ್ಯಾನಿಲಯದ ಮುಂದಿನ ಆದೇಶದವರೆಗೆ ಪರಿಸರ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು. |
| **ಸಾಮಾನ್ಯ ಸಭೆ 2022/4.13** | ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಡಾ. ಡಿ.ವಿ.ಗೋಪಾಲಪ್ಪ, ಪ್ರಾಧ್ಯಾಪಕರು, ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಅಧ್ಯಕ್ಷರ ಅವಧಿಯು ದಿನಾಂಕ 07.05.2022ಕ್ಕೆ ಮುಕ್ತಾಯಗೊಳ್ಳುವುದರಿಂದ, ಸದರಿ ಅಧ್ಯಯನ ವಿಭಾಗದ ಪ್ರಾಧ್ಯಾಪಕರ ಜೇಷ್ಠತೆಯಲ್ಲಿ ಹಿರಿಯರಾಗಿರುವ ಡಾ. ಎಂ. ಮಹೇಶ, ಇವರನ್ನು ದಿನಾಂಕ 08.05.2022ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ವಿಶ್ವವಿದ್ಯಾನಿಲಯದ ಮುಂದಿನ ಆದೇಶದವರೆಗೆ ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು. |
| **ಸಾಮಾನ್ಯ ಸಭೆ 2022/4.14** | ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗಕ್ಕೆ ಸಂಬಂಧಿಸಿದ ಸಮಿತಿ ವರದಿಯ ಬಗ್ಗೆ. |
| | ಡಾ. ಚೈತ್ರ ನಾರಾಯಣ ರವರು ಮಾತನಾಡಿ ದಿನಾಂಕ 11-3-2022 ರಂದು ಕುಲಸಚಿವರ ಅಧ್ಯಕ್ಷತೆಯಲ್ಲಿ ಸಿಂಡಿಕೇಟ್ ಸದಸ್ಯರೊಂದಿಗೆ ತಾವು ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗದ ವಿದ್ಯಾರ್ಥಿಗಳನ್ನು ಮತ್ತು ಸಂಶೋಧನಾ ವಿದ್ಯಾರ್ಥಿಗಳನ್ನು ಭೇಟಿ ಮಾಡಿ ಅವರ ಕುಂದು ಕೊರತೆಗಳನ್ನು ವಿಚಾರಿಸಲಾಯಿತು. ಪ್ರೊ. ಸಪ್ನಾ ಎಂ.ಎಸ್ ರವರ ವಿರುದ್ದ ವಿದ್ಯಾರ್ಥಿಗಳು ಮೌಖಿಕವಾಗಿ ದೂರುಗಳನ್ನು ಸಲ್ಲಿಸಿದರು.<br><br>ಸಂಶೋಧನಾ ವಿದ್ಯಾರ್ಥಿಯಾದ ರಾಕೇಶ್ ಗೌಡ ರವರು ಪ್ರೊ. ಸಪ್ನಾ ಎಂ.ಎಸ್ ರವರ ಮಾರ್ಗದರ್ಶನದಲ್ಲಿ ಪಿಹೆಚ್.ಡಿ., ಮಾಡುತ್ತಿದ್ದು, ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗದ ವಿದ್ಯಾರ್ಥಿನಿಯಾದ ಪಲ್ಲವಿಯವರು ರಾಕೇಶ್‌ಗೌಡ ವಿರುದ್ಧ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ದೂರು ನೀಡಿರುತ್ತಾರೆ. ಆಂತರಿಕ ದೂರು ಸಮಿತಿಯವರು ದೂರಿಗೆ ಸಂಬಂಧಿಸಿದಂತೆ ವಿಚಾರಣೆಯನ್ನು ನಡೆಸಿ ವರದಿಯನ್ನು ನೀಡಿರುತ್ತಾರೆ. ಮುಂದುವರಿದು ರಾಕೇಶ್ ಗೌಡ ಹಿಂದೆ ಒಬ್ಬ ವಿದ್ಯಾರ್ಥಿನಿಯೊಂದಿಗೆ ಅಸಭ್ಯವಾಗಿ ವರ್ತಿಸಿದ್ದು ಈಗಾಗಲೇ ಆತನ ವಿರುದ್ಧ ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಅದೇ ರೀತಿ ಪಲ್ಲವಿ ಎಂಬ ವಿದ್ಯಾರ್ಥಿನಿಯೊಂದಿಗೂ ಸಹ ಅಸಭ್ಯವಾಗಿ ವರ್ತಿಸಿದ್ದು, ಕಂಡು ಬಂದಿರುತ್ತದೆ ಹಾಗಾಗಿ |

| | |
|---|---|
| | ರಾಕೇಶ್‌ಗೌಡ ವಿರುದ್ಧ ವಿಶ್ವವಿದ್ಯಾನಿಲಯ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು. ಪಲ್ಲವಿಯು ಪ್ರತಿಭಾನ್ವಿತ ವಿದ್ಯಾರ್ಥಿಯಾಗಿದ್ದು ಅವಳಿಗೆ ವಿಶ್ವವಿದ್ಯಾನಿಲಯದಿಂದ ನ್ಯಾಯ ದೊರೆಯಬೇಕೆಂದು ಅಗ್ರಹಿಸಿದರು. ರಾಕೇಶ್‌ಗೌಡ ಘಟಿಕೋತ್ಸವದಂದು ರಾಜ್ಯಪಾಲರಿಂದ ಪಿಹೆಚ್.ಡಿ., ಪದವಿಯನ್ನು ಸಹ ಪಡೆದುಕೊಂಡಿದ್ದಾನೆ, ಸದರಿಯವರನ್ನು ರೇಡಿಯೋ ಮಾನಸದ ಸಂಯೋಜಕ ಹುದ್ದೆಯಿಂದ ವಜಾ ಮಾಡಬೇಕೆಂದು ಕೋರಿದರು ಹಾಗೂ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗದ ನ್ಯೂನ್ಯತೆಗಳನ್ನು ಸರಿಪಡಿಸುವಂತೆ ಕೋರಿದರು.<br><br>ಶ್ರೀ ಎಸ್. ಡಿ. ದೊಡ್ಡಚಾರಿಯವರು ಮಾತನಾಡಿ, ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗದ ವಿದ್ಯಾರ್ಥಿಗಳು ರೇಡಿಯೋ ಮಾನಸದ ವಿರುದ್ಧವಿದ್ದಾರೆ. ಆದ್ದರಿಂದ ರಾಕೇಶ್‌ಗೌಡರ ಬದಲಾಗಿ ಬೇರೆಯವರನ್ನು ಕೋಆರ್ಡಿನೇಟರ್ ಆಗಿ ನಿಯೋಜಿಸಿ ಎಂದು ಒತ್ತಾಯಿಸಿದರು.<br><br>ಶ್ರೀ ಆರ್.ಪ್ರದೀಪ್ ಕುಮಾರ್ ದೀಕ್ಷಿತ್‌ರವರು ಮಾತನಾಡಿ, ತಜ್ಞರ ಸಲಹೆಯನ್ನು ಪಡೆದುಕೊಂಡು ರೇಡಿಯೋ ಮಾನಸದಲ್ಲಿ ಕಾರ್ಯಕ್ರಮಗಳನ್ನು ನಿಯೋಜಿಸಬೇಕೆಂದು ಸಲಹೆ ನೀಡಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಸಲಹಾ ಸಮಿತಿ ಹಾಗೂ ತಾಂತ್ರಿಕ ಸಮಿತಿಗಳನ್ನು ರಚಿಸಲಾಗುವುದು ಹಾಗೂ ಸದರಿ ಸಮಿತಿಗಳಿಗೆ ಸಿಂಡಿಕೇಟ್ ಸದಸ್ಯರುಗಳನ್ನು ಸಹ ಸದಸ್ಯರುಗಳನ್ನಾಗಿ ಸೇರ್ಪಡೆಗೊಳಿಸಲಾಗುವುದು ಎಂದು ತಿಳಿಸಿದರು.<br><br>ಶ್ರೀ ಎಸ್. ಡಿ. ದೊಡ್ಡಚಾರಿಯವರು ಮಾತನಾಡಿ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ಡೀನ್‌ರನ್ನು ನೇಮಕ ಮಾಡಿ ಎಂದು ಸಲಹೆ ನೀಡಿದರು. |
| **ತೀರ್ಮಾನ** | ರೇಡಿಯೋ ಮಾನಸದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ರಾಕೇಶ್‌ಗೌಡರ ಬದಲಾಗಿ ಡಾ. ಭಾನುಪ್ರತಾಪ್, ತಾಂತ್ರಿಕ ಸಹಾಯಕರು, ಎಂ.ಎಲ್.ಆರ್.ಸಿ.ಸಿ., ಮಾನಸಗಂಗೋತ್ರಿ, ಮೈಸೂರು, ಡಾ. ಕುಮಾರ್, MOOC, ಸಿಸ್ಟಂ ಕೋಅರ್ಡಿನೇಟರ್ ಆಗಿ ಹಾಗೂ ಪ್ರೊ. ಬಾಲಸುಬ್ರಮಣ್ಯಂ ರವರನ್ನು ರೇಡಿಯೋ ಮಾನಸದ ಮುಖ್ಯ ಸಲಹೆಗಾರರನ್ನಾಗಿ ನೇಮಿಸುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು. |
| **ಸಾಮಾನ್ಯ ಸಭೆ 2022/4.15** | 2019–20 ಮತ್ತು 2021–22ನೇ ಶೈಕ್ಷಣಿಕ ಸಾಲಿಗೆ ವಿಜಯ ಶಿಕ್ಷಣ ಮಹಾವಿದ್ಯಾಲಯ, ಪಾಂಡವಪುರ, ಮಂಡ್ಯ ಜಿಲ್ಲೆ ಈ ಕಾಲೇಜಿನ ಸಂಯೋಜನೆ ಮುಂದುವರೆಸಲು ಸ್ಥಳೀಯ ವಿಚಾರಣಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ನೀಡಿರುವ ವರದಿಯನ್ನು ಅನುಮೋದಿಸುವ ಬಗ್ಗೆ. |
| **ತೀರ್ಮಾನ** | ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ಸಿಂಡಿಕೇಟ್ ನಿರ್ಣಯವನ್ನು ಕಾಯ್ದಿರಿಸಿ, 2019–20 ಮತ್ತು 2021–22ನೇ ಶೈಕ್ಷಣಿಕ ಸಾಲಿಗೆ ವಿಜಯ ಶಿಕ್ಷಣ ಮಹಾವಿದ್ಯಾಲಯ, ಪಾಂಡವಪುರ, ಮಂಡ್ಯ ಜಿಲ್ಲೆ ಈ ಕಾಲೇಜಿನ ಸಂಯೋಜನೆ ಮುಂದುವರೆಸಲು ಸ್ಥಳೀಯ ವಿಚಾರಣಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ನೀಡಿರುವ ವರದಿಯನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |

| | |
|---|---|
| **ಸಾಮಾನ್ಯ ಸಭೆ 2022/4.16** | ಅತಿಥಿ ಉಪನ್ಯಾಸಕರ ವೇತನ ಪರಿಷ್ಕರಿಸುವ ಬಗ್ಗೆ |
| | ಮಾನ್ಯ ಕುಲಪತಿಯವರು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ಅತಿಥಿ ಉಪನ್ಯಾಸಕರುಗಳು ತಮ್ಮನ್ನು ಖಾಯಂಗೊಳಿಸುವಂತೆ ಹಾಗೂ ವೇತನ ಪರಿಷ್ಕರಿಸುವಂತೆ ತಮ್ಮಲ್ಲಿ ಮನವಿ ಮಾಡಿಕೊಂಡಿರುತ್ತಾರೆ ಎಂದು ಸಭೆಗೆ ತಿಳಿಸಿದರು.<br><br>ಪ್ರೊ. ರಮೇಶ್ ಹಾಗೂ ಶ್ರೀ ಎಸ್. ಡಿ. ದೊಡ್ಡಚಾರಿಯವರು ಮಾತನಾಡಿ, ನ್ಯಾಯಾಲಯದ ಮೊರೆ ಹೋಗಿರುವ ಅತಿಥಿ ಉಪನ್ಯಾಸಕರು/ ಅಧ್ಯಾಪಕರುಗಳಿಗೆ ವೇತನ ಪರಿಷ್ಕರಿಸಲು ಸಾಧ್ಯವಿರುವುದಿಲ್ಲ, ಅತಿಥಿ ಉಪನ್ಯಾಸಕರ ವೇತನ ಪರಿಷ್ಕರಿಸಿದರೆ ನ್ಯಾಯಾಲಯ ನಿಂದನೆ ಆಗುವ ಸಂಭವವಿರುತ್ತದೆ.<br><br>ಶ್ರೀ ಎಸ್.ಡಿ.ದೊಡ್ಡಚಾರಿಯವರು ಮಾತನಾಡಿ, ಅತಿಥಿ ಉಪನ್ಯಾಸಕರುಗಳನ್ನು ನೇಮಕಾತಿ ಹಾಗೂ ವೇತನ ಪರಿಷ್ಕರಿಸುವ ಸಂದರ್ಭದಲ್ಲಿ ಸದರಿಯವರಿಗೆ ಈ ಕೆಳಕಂಡಂತೆ ಷರತ್ತು ವಿಧಿಸಿ ಎಂದು ಸಭೆಗೆ ತಿಳಿಸಿದರು.<br><br>"ಅತಿಥಿ ಉಪನ್ಯಾಸಕರುಗಳು ನೇಮಕಾತಿ ವರ್ಷ, ಆಯಾ ವಿಷಯದಲ್ಲಿ ಕನಿಷ್ಠ ಒಂದು ಸಂಶೋಧನಾ ಲೇಖನವನ್ನು SCOPUS ಅಥವಾ Web of Science ನ Journal ಗಳಲ್ಲಿ ಪ್ರಕಟಿಸುವುದು ಮತ್ತು ವಿಶ್ವವಿದ್ಯಾನಿಲಯಕ್ಕೆ ಮಾಹಿತಿಗಾಗಿ ಸಲ್ಲಿಸುವುದು" ಸದರಿ ಷರತ್ತನ್ನು ಜಾರಿಗೆ ತರಲು ಕೋರಿದರು. |
| **ತೀರ್ಮಾನ** | ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ಸ್ಥಾಯಿ ಸಮಿತಿಯನ್ನು ರಚಿಸಿ ಅತಿಥಿ ಉಪನ್ಯಾಸಕರ ವೇತನ ಪರಿಷ್ಕರಿಸಲಾಗುವುದು ಎಂದು ಸಭೆಯಲ್ಲಿ ತೀರ್ಮಾನಿಸಲಾಯಿತು. |
| **ಸಾಮಾನ್ಯ ಸಭೆ 2022/4.17** | ಮೈಸೂರು ವಿಶ್ವವಿದ್ಯಾನಿಲಯದ ಮೌಲ್ಯಮಾಪನ ಕೇಂದ್ರದಲ್ಲಿ ಪರಿಸರ ವಿಷಯ ಉತ್ತರ ಪತ್ರಿಕೆಗಳ ಕುರಿತು ಜರುಗಿಸಿರುವ ಪ್ರಕರಣದ ಬಗ್ಗೆ. |
| | ಕುಲಸಚಿವ (ಪರೀಕ್ಷಾಂಗ) ರವರು ಮಾತನಾಡಿ, ದಿನಾಂಕ 19.04.2021ರಂದು ಪರೀಕ್ಷಾ ಭವನದಲ್ಲಿ ಪರಿಸರ ಅಧ್ಯಯನ ಹಾಗೂ ಇನ್ನಿತರ ವಿಷಯಗಳ ಮೌಲ್ಯಮಾಪನ ಕಾರ್ಯವು ಜರುಗುತ್ತಿದ್ದ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ನಿಯಮವನ್ನು ಪಾಲಿಸದೆ ಮೊಬೈಲನ್ನು ಮೌಲ್ಯಮಾಪನ ಕೇಂದ್ರಕ್ಕೆ ಕೊಂಡೊಯ್ಯುವುದಲ್ಲದೆ ಕೇಂದ್ರದಲ್ಲಿನ ಮೌಲ್ಯಮಾಪನ ಕಾರ್ಯಗಳನ್ನು ಚಿತ್ರೀಕರಿಸಿರುವ ಹಾಗೂ ಸದರಿ ವೀಡಿಯೋವನ್ನು ವಾಟ್ಸಪ್ ಗ್ರೂಪ್/ಮಾಧ್ಯಮಗಳಿಗೆ ರವಾನಿಸಲಾಗಿರುವ ಪ್ರಕರಣ ಕುರಿತಂತೆ, ಡಾ. ಹೆಚ್. ಆರ್. ಮೀನಾಕುಮಾರಿ, ಅತಿಥಿ ಉಪನ್ಯಾಸಕರು, ಪರಿಸರ ಅಧ್ಯಯನ ವಿಭಾಗ, ಮಹಾರಾಜ ಕಾಲೇಜು, ಮತ್ತು ಶ್ರೀ ಸುಜಿತ್, ಅತಿಥಿ ಉಪನ್ಯಾಸಕರು, ಪರಿಸರ ಅಧ್ಯಯನ ವಿಭಾಗ, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಹುಣಸೂರು ಇವರುಗಳ ಬಗ್ಗೆ ಶಿಸ್ತು ಕ್ರಮ ಜರುಗಿಸಲು ಸಿಂಡಿಕೇಟ್ ಸದಸ್ಯರನ್ನೊಳಗೊಂಡ ಒಂದು ಉಪ ಸಮಿತಿಯನ್ನು ರಚಿಸಲಾಯಿತು, ಸದರಿ ಸಮಿತಿಯ ತೀರ್ಮಾನದ ವರದಿಯನ್ನು ಸಭೆಯಲ್ಲಿ ಮಂಡಿಸಿದರು. |
| **ತೀರ್ಮಾನ** | ಡಾ. ಮೀನಾಕುಮಾರಿ ಮತ್ತು ಶ್ರೀ ಸುಜಿತ್ ರವರಿಗೆ ಎಚ್ಚರಿಕೆ ನೋಟೀಸ್ ಜಾರಿಗೊಳಿಸುವುದು, ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಯೋಜನೆಗೆ ಒಳಪಟ್ಟ ಕಾಲೇಜುಗಳಿಂದ ಮುಂದಿನ ಎರಡು ವರ್ಷಗಳ ಕಾಲ ಮೌಲ್ಯಮಾಪನ ಕಾರ್ಯದಿಂದ |

| | |
|---|---|
| | ಹೊರಗಿಡುವುದು, ಈ ಮಾಹಿತಿಯನ್ನು ಅವರು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ವಿಶ್ವವಿದ್ಯಾನಿಲಯದ ಕುಲಪತಿ/ಕುಲಸಚಿವರಿಗೆ ಅಥವಾ ಕಾಲೇಜಿನ ಪ್ರಾಂಶುಪಾಲರಿಗೆ ಹಾಗೂ ಸಂಬಂಧಪಟ್ಟ ವಿಭಾಗಕ್ಕೆ ಪ್ರತಿಯನ್ನು ಕಳುಹಿಸಲು ಸಭೆಯು ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2022/4.18** | ಶೈಕ್ಷಣಿಕ ಮತ್ತು ಸಮಾಜ ವಿಜ್ಞಾನ ವಿಷಯಗಳಲ್ಲಿ ಸಂಶೋಧನಾ ಕಾರ್ಯ ಕೈಗೊಳ್ಳಲು ಹಾಗೂ ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮದ ಬಗ್ಗೆ ಮೈಸೂರು ವಿಶ್ವವಿದ್ಯಾನಿಲಯ ಮತ್ತು The Institute for Social and Economic Change (ISEC), ಬೆಂಗಳೂರು ನಡುವೆ ಆಗಿರುವ ಒಡಂಬಡಿಕೆಯನ್ನು (MoU) 05 ವರ್ಷಗಳ ಅವಧಿಗೆ ನವೀಕರಿಸುವ ಬಗ್ಗೆ. |
| | ಕುಲಸಚಿವರು ಮಾತನಾಡಿ, Institute for Social and Economic Change(ISEC), ಬೆಂಗಳೂರು ಇವರು ತಮ್ಮ ಪತ್ರದಲ್ಲಿ, ಸಂಸ್ಥೆಯ ಶೈಕ್ಷಣಿಕ ಮತ್ತು ಸಮಾಜವಿಜ್ಞಾನ ವಿಷಯಗಳಲ್ಲಿ ಸಂಶೋಧನಾ ಕಾರ್ಯ ಕೈಗೊಳ್ಳಲು ಹಾಗೂ ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮದ ಬಗ್ಗೆ ಮೈಸೂರು ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ದಿನಾಂಕ 23.05.2022ರಂದು ಅಂತ್ಯಗೊಳ್ಳುತ್ತಿರುವುದರಿಂದ ಪುನಃ ಯಥಾವತ್ತಾಗಿ ಮುಂದಿನ 05 ವರ್ಷಗಳ ಅವಧಿಗೆ ಪರಸ್ಪರ ಒಡಂಬಡಿಕೆಯನ್ನು(MoU) ನವೀಕರಿಸಬೇಕೆಂದು ಕೋರಿರುತ್ತಾರೆ. |
| **ತೀರ್ಮಾನ** | ಶೈಕ್ಷಣಿಕ ಮತ್ತು ಸಮಾಜ ವಿಜ್ಞಾನ ವಿಷಯಗಳಲ್ಲಿ ಸಂಶೋಧನಾ ಕಾರ್ಯ ಕೈಗೊಳ್ಳಲು ಹಾಗೂ ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮದ ಬಗ್ಗೆ ಮೈಸೂರು ವಿಶ್ವವಿದ್ಯಾನಿಲಯ ಮತ್ತು The Institute for Social and Economic Change (ISEC), ಬೆಂಗಳೂರು ನಡುವೆ ಆಗಿರುವ ಒಡಂಬಡಿಕೆಯನ್ನು (MoU) 05 ವರ್ಷಗಳ ಅವಧಿಗೆ ನವೀಕರಿಸಲು ಅನುಮತಿ ಕೋರಿರುವುದನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/4.19** | ಇಂಟರ್‌ನ್ಯಾಷನಲ್ ಇನ್ಸ್‌ಟಿಟ್ಯೂಟ್ ಫಾರ್ ಅಸಿಸ್ಟೆಡ್ ರಿಪ್ರೊಡಕ್ಟಿವ್ ಟೆಕ್ನಾಲಜಿ ಅಂಡ್ ರಿಸರ್ಚ್ ಸೆಂಟರ್, ಮೈಸೂರು ಇವರು Specialized Programme ಅಡಿಯಲ್ಲಿ ನಡೆಸುತ್ತಿರುವ M.Sc. (Assisted Reproduction and Embryology) ಕೋರ್ಸ್‌ಗೆ ಹೆಚ್ಚುವರಿಯಾಗಿ 40 ಪ್ರವೇಶಾತಿಗಳಿಗೆ ಅನುಮತಿ ಕೋರಿರುವ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| | ಪ್ರೊ. ವೆಂಕಟೇಶ್‌ಕುಮಾರ್‌ರವರು ಮಾತನಾಡಿ, ಇಂಟರ್‌ನ್ಯಾಷನಲ್ ಇನ್ಸ್‌ಟಿಟ್ಯೂಟ್ ಫಾರ್ ಅಸಿಸ್ಟೆಡ್ ರಿಪ್ರೊಡಕ್ಟಿವ್ ಟೆಕ್ನಾಲಜಿ ಅಂಡ್ ರಿಸರ್ಚ್ ಸೆಂಟರ್, ಮೈಸೂರು ಇವರು Specialized Programme ಅಡಿಯಲ್ಲಿ ನಡೆಸುತ್ತಿರುವ M.Sc. (Assisted Reproduction and Embryology) ಕೋರ್ಸ್‌ಗೆ ಹೆಚ್ಚುವರಿಯಾಗಿ 40 ಪ್ರವೇಶಾತಿಗಳಿಗೆ ಅನುಮತಿ ಕೋರಿರುವ ಸಂಬಂಧ ಪರಿವೀಕ್ಷಣಾ ಸಮಿತಿಗೆ ಡೀನ್‌ಗಳನ್ನು ನೇಮಿಸಿರುವುದಿಲ್ಲ ಇದಕ್ಕೆ ಕಾರಣ ಏನು ಎಂದು ಪ್ರಶ್ನಿಸಿದರು?.<br><br>ಇದಕ್ಕುತ್ತರವಾಗಿ ಮಾನ್ಯ ಕುಲಪತಿಯವರು ಮಾತನಾಡಿ, Specialized programme ಪ್ರಾರಂಭಿಸುವುದಕ್ಕೆ ಡೀನ್‌ಗಳನ್ನು ಸಮಿತಿಯಲ್ಲಿ ನೇಮಿಸಬೇಕೆಂದು ಯಾವುದೇ ನಿಯಮಗಳು ಇರುವುದಿಲ್ಲ ಎಂದು ಪ್ರೊ. ವೆಂಕಟೇಶ್‌ಕುಮಾರ್‌ರವರಿಗೆ ತಿಳಿಸಿದರು. |

| | |
|---|---|
| | ಪ್ರೊ. ವೆಂಕಟೇಶ್ ಕುಮಾರ್‌ರವರು ಮಾತನಾಡಿ Specialized programme ಪ್ರಾರಂಭಿಸುವುದಕ್ಕೆ ಡೀನ್‌ಗಳನ್ನು ಸಮಿತಿಯಲ್ಲಿ ನೇಮಿಸದಿರುವುದಕ್ಕೆ ತಮ್ಮ ವಿರೋಧವಿದೆ ಎಂದು ಸಭೆಯ ಗಮನಕ್ಕೆ ತಂದರು.<br>ಮಾನ್ಯ ಕುಲಪತಿಯವರು ಮಾತನಾಡಿ, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಪತ್ರ ಮುಖೇನ ತಮಗೆ ನೀಡಿದರೆ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಪ್ರೊ. ವೆಂಕಟೇಶ್ ಕುಮಾರ್‌ರವರಿಗೆ ತಿಳಿಸಿದರು. |
| **ತೀರ್ಮಾನ** | ಇಂಟರ್‌ನ್ಯಾಷನಲ್ ಇನ್ಸ್‌ಟಿಟ್ಯೂಟ್ ಫಾರ್ ಅಸಿಸ್ಟೆಡ್ ರಿಪ್ರೊಡಕ್ಟಿವ್ ಟೆಕ್ನಾಲಜಿ ಅಂಡ್ ರಿಸರ್ಚ್ ಸೆಂಟರ್, ಮೈಸೂರು ಇವರು Specialized Programme ಅಡಿಯಲ್ಲಿ ನಡೆಸುತ್ತಿರುವ M.Sc. (Assisted Reproduction and Embryology) ಕೋರ್ಸ್‌ಗೆ ಹೆಚ್ಚುವರಿಯಾಗಿ 40 ಪ್ರವೇಶಾತಿಗಳಿಗೆ ಅನುಮತಿ ಕೋರಿರುವ ಸಂಬಂಧ ಸ್ಥಳೀಯ ವಿಚಾರಣಾ ಸಮಿತಿಯು ಭೇಟಿ ನೀಡಿ ಸಂಸ್ಥೆಯಲ್ಲಿನ ಮೂಲಭೂತ ಸೌಲಭ್ಯಗಳು ಹಾಗೂ ಇತರೆ ಅಗತ್ಯ ಮಾಹಿತಿಗಳನ್ನು ಪರಿಶೀಲಿಸಿ, ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ನೀಡಿರುವ ವರದಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/4.20** | ದಿನಾಂಕ : 01–04–2006ರಂದು ಮತ್ತು ನಂತರ ಸೇವೆಗೆ ಸೇರಿದ ಉದ್ಯೋಗಿಗಳಿಗೆ ನಿವೃತ್ತಿ ಉಪದಾನ, ಮರಣ ಉಪದಾನ, ಕುಟುಂಬ ಪಿಂಚಣಿ ಸೌಲಭ್ಯಗಳನ್ನು ವಿಸ್ತರಿಸುವ ಬಗೆಗೆ. |
| | ದಿನಾಂಕ 01.04.2006ರಂದು ಮತ್ತು ನಂತರ ಸೇವೆಗೆ ಸೇರಿದ ಉದ್ಯೋಗಿಗಳಿಗೆ ರಾಷ್ಟ್ರೀಯ ಪಿಂಚಣಿ ಯೋಜನೆ (NPS) ಅಳವಡಿಸಲಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಇಡಿ 55ಯುಎಂವಿ 2021, ದಿನಾಂಕ:18.01.2022ರ ಆದೇಶದಲ್ಲಿ ಎನ್.ಪಿ.ಎಸ್‌ಗೆ ಒಳಪಡುವ ಉದ್ಯೋಗಿಗಳಿಗೆ ನಿವೃತ್ತಿ ಉಪದಾನ, ಮರಣ ಉಪದಾನ, ಕುಟುಂಬ ಪಿಂಚಣಿ ಸೌಲಭ್ಯವನ್ನು ವಿಸ್ತರಿಸುವ ಬಗೆ.<br>ಸರ್ಕಾರದ ಮತ್ತು ವಿಶ್ವವಿದ್ಯಾನಿಲಯಗಳ ಆದೇಶಗಳನ್ವಯ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ದಿನಾಂಕ:18.01.2022ರ ಸರ್ಕಾರದ ಪತ್ರದಲ್ಲಿ ಮೇಲಿನ ಸೌಲಭ್ಯಗಳನ್ನು ಪಾವತಿಸಲು ವಿಶ್ವವಿದ್ಯಾನಿಲಯದ ಸ್ವಂತ ಸಂಪನ್ಮೂಲಗಳಿಂದ ಭರಿಸಿಕೊಳ್ಳಲು ತಿಳಿಸಿರುತ್ತಾರೆ. ಆದುದರಿಂದ ಸದರಿ ಸೌಲಭ್ಯಗಳ ವೆಚ್ಚವನ್ನು PENSION FUNDಯಿಂದ ಭರಿಸಬಹುದು. ಮೇಲಿನ ಎಲ್ಲಾ ಅಂಶವನ್ನು ಅವಗಾಹನೆಗೆ ತರುತ್ತಾ ಹೊರಡಿಸಿರುವ ಸುತ್ತೋಲೆಗಳು ಹಾಗೂ ದಿನಾಂಕ:18.01.2022ರ ಸರ್ಕಾರದ ಪತ್ರದಲ್ಲಿ ತಿಳಿಸಿರುವ ಅಂಶವನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿಕೊಳ್ಳಲು, ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಮಂಡಿಸಲಾಗಿದೆ ಎಂದು ಹಣಕಾಸು ಅಧಿಕಾರಿಯವರು ಸಭೆಯ ಗಮನಕ್ಕೆ ತಂದರು. |
| **ತೀರ್ಮಾನ** | ದಿನಾಂಕ 01.04.2006ರಂದು ಮತ್ತು ನಂತರ ಸೇವೆಗೆ ಸೇರಿದ ಉದ್ಯೋಗಿಗಳಿಗೆ ರಾಷ್ಟ್ರೀಯ ಪಿಂಚಣಿ ಯೋಜನೆ (NPS) ಅಳವಡಿಸಲಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಇಡಿ 55ಯುಎಂವಿ 2021, ದಿನಾಂಕ:18.01.2022ರ ಆದೇಶದಲ್ಲಿ ಎನ್.ಪಿ.ಎಸ್‌ಗೆ ಒಳಪಡುವ ಉದ್ಯೋಗಿಗಳಿಗೆ ನಿವೃತ್ತಿ ಉಪದಾನ, ಮರಣ ಉಪದಾನ, ಕುಟುಂಬ ಪಿಂಚಣಿ ಸೌಲಭ್ಯವನ್ನು ವಿಸ್ತರಿಸುವ ಸಂಬಂಧ ದಿನಾಂಕ:18.01.2022ರ ಸರ್ಕಾರದ ಪತ್ರದಲ್ಲಿ ಮೇಲಿನ ಸೌಲಭ್ಯಗಳನ್ನು ಪಾವತಿಸಲು |

| | |
|---|---|
| | ವಿಶ್ವವಿದ್ಯಾನಿಲಯದ ಸ್ವಂತ ಸಂಪನ್ಮೂಲಗಳಿಂದ ಭರಿಸಿಕೊಳ್ಳಲು ತಿಳಿಸಿರುತ್ತಾರೆ. ಆದುದರಿಂದ ಸದರಿ ಸೌಲಭ್ಯಗಳ ವೆಚ್ಚವನ್ನು PENSION FUNDಯಿಂದ ಭರಿಸಬಹುದು ಎಂಬ ಅಂಶವನ್ನು ಅವಗಾಹನೆಗೆ ತರುತ್ತಾ ಹೊರಡಿಸಿರುವ ಸುತ್ತೋಲೆಗಳು ಹಾಗೂ ಸರ್ಕಾರದ ಪತ್ರದಲ್ಲಿ ತಿಳಿಸಿರುವ ಅಂಶವನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿಕೊಳ್ಳಲು, ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/4.21** | "ಬೌದ್ಧ ಅಧ್ಯಯನ ಕೇಂದ್ರ"ವನ್ನು ಸ್ಥಾಪಿಸುವುದರ ಬಗ್ಗೆ. |
| **ತೀರ್ಮಾನ** | ಈ ವಿಷಯವನ್ನು ಮುಂದೂಡಲಾಯಿತು. |
| **ಸಾಮಾನ್ಯ ಸಭೆ 2022/4.22** | ನ್ಯಾಷನಲ್ ಯುನಿವರ್ಸಿಟಿ ಆಫ್ ಸಿಂಗಾಪುರ್ ಇಲ್ಲಿಗೆ ಭೇಟಿ ನೀಡುತ್ತಿರುವ ಬಗ್ಗೆ. |
| | ಪ್ರೊ.ವೆಂಕಟೇಶ್ ಕುಮಾರ್ ರವರು ಮಾತನಾಡಿ, ಯಾವ ಉದ್ದೇಶಕ್ಕಾಗಿ ಹೋಗುತ್ತಿದ್ದಾರೆ? ಅವರು ಸಿಂಗಾಪುರ್‌ನಿಂದ ಬಂದ ನಂತರ ವಿಶ್ವವಿದ್ಯಾನಿಲಯಕ್ಕೆ ವರದಿಯನ್ನು ಸಲ್ಲಿಸಬೇಕು ಎಂದು ತಿಳಿಸಿದರು. |
| **ತೀರ್ಮಾನ** | ಡಾ. ಸಂಗೀತ ಗಜಾನನ ಭಟ್, ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಮತ್ತು ಶ್ರೀಮತಿ ಪವಿತ್ರ ವೈ. ಕೆ. ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಮೇ/ಜೂನ್ 2022ರ ಮಾಹೆಯಲ್ಲಿ ನ್ಯಾಷನಲ್ ಯೂನಿವರ್ಸಿಟಿ ಆಫ್ ಸಿಂಗಾಪುರ್, ಸಿಂಗಾಪುರ್‌ಗೆ ಭೇಟಿ ನೀಡಿ ಆ ವಿಶ್ವವಿದ್ಯಾನಿಲಯದ ಹಣಕಾಸು ಹಾಗೂ ಆಡಳಿತಾತ್ಮಕ ವ್ಯವಸ್ಥೆಯನ್ನು ಅಧ್ಯಯನ ಮಾಡಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅದನ್ನು ಅನುಷ್ಠಾನಗೊಳಿಸುವ ಸಲುವಾಗಿ ಹೋಗಿಬರಲು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| **ಸಾಮಾನ್ಯ ಸಭೆ 2022/4.23** | ಶೇರ್-ಇ-ಕಾಶ್ಮೀರ್ ಯುನಿವರ್ಸಿಟಿ ಆಫ್ ಅಗ್ರಿಕಲ್ಚರಲ್ ಸೈನ್ಸಸ್ ಅಂಡ್ ಟೆಕ್ನಾಲಜಿ ಆಫ್ ಕಾಶ್ಮೀರ್ ಶ್ರೀನಗರ ಹಾಗೂ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯಗಳಿಗೆ ಭೇಟಿ ನೀಡಿರುವ ಬಗ್ಗೆ. |
| | ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರುಗಳು ದಿನಾಂಕ 06.04.2022ರಿಂದ ದಿನಾಂಕ 13.04.2022ರ ವರೆಗೆ ಶೇರ್-ಇ-ಕಾಶ್ಮೀರ್ ಯುನಿವರ್ಸಿಟಿ ಆಫ್ ಅಗ್ರಿಕಲ್ಚರಲ್ ಸೈನ್ಸಸ್ ಅಂಡ್ ಟೆಕ್ನಾಲಜಿ ಆಫ್ ಕಾಶ್ಮೀರ್ ಶ್ರೀನಗರ ಹಾಗೂ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯಗಳಿಗೆ ಭೇಟಿ ನೀಡಿ ಆ ವಿಶ್ವವಿದ್ಯಾನಿಲಯಗಳ "ಬೆಸ್ಟ್ ಪ್ರಾಕ್ಟೀಸ್" ನಿಯಮಾವಳಿಯನ್ನು ಅಧ್ಯಯನ ಮಾಡಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅನುಷ್ಠಾನಗೊಳಿಸುವ ನಿಮಿತ್ತ ಈ ಕೆಳಕಂಡ ಸಿಂಡಿಕೇಟ್ ಸದಸ್ಯರು ಹಾಗೂ ಡಾ. ಚಂದ್ರನಾಯಕ್, ಸಂಯೋಜಕರು, ಐಒಇ, ವಿಜ್ಞಾನ ಭವನ, ಮಾನಸಗಂಗೋತ್ರಿ, ಮೈಸೂರು ಇವರು ತಂಡದ ಸಂಯೋಜಕರಾಗಿ ತೆರಳಿ ಕರ್ತವ್ಯ ನಿರ್ವಹಿಸುವುದಕ್ಕೆ ಹಾಗೂ ಈ ಭೇಟಿಗೆ ತಗಲುವ ವಿಮಾನಯಾನ ದರ, ವಾಸ್ತವ್ಯ ಹಾಗೂ ಇನ್ನಿತರ ಪ್ರಾಸಂಗಿಕ ಖರ್ಚು ವೆಚ್ಚಗಳ ಸಂಬಂಧ ಸಿಂಡಿಕೇಟ್ ಸಭೆಯ ಅವಗಾಹನೆ ಮತ್ತು ಅನುಮೋದನೆಗಾಗಿ ಮಂಡಿಸಿದೆ ಎಂದು ಮಾನ್ಯ ಕುಲಸಚಿವರು ಸಭೆಯ ಗಮನಕ್ಕೆ ತಂದರು. |

<table>
<tr><td></td><td><table>
<tr><td>1</td><td>ಡಾ. ಎಸ್. ಡಿ. ದೊಡ್ಡಾಚಾರಿ<br>ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.</td><td>5</td><td>ಡಾ. ಎಂ.ಎಸ್. ದಾಮೋದರ<br>ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.</td></tr>
<tr><td>2</td><td>ಡಾ. ಚೈತ್ರ ನಾರಾಯಣ್<br>ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.</td><td>6</td><td>ಶ್ರೀ ಆರ್. ಪ್ರದೀಪ್ ಕುಮಾರ್ ದೀಕ್ಷಿತ್<br>ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.</td></tr>
<tr><td>3</td><td>ಡಾ. ಈ.ಸಿ. ನಿಂಗರಾಜು ಗೌಡ<br>ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.</td><td>7</td><td>ಡಾ. ಚಂದ್ರನಾಯಕ್<br>ಸಂಯೋಜಕರು, ಐಒಇ, ವಿಜ್ಞಾನ ಭವನ, ಮಾನಸಗಂಗೋತ್ರಿ, ಮೈಸೂರು.</td></tr>
<tr><td>4</td><td>ಶ್ರೀ ಎಂ. ಬಿ. ಗಪ್ಪಣ್ಣ<br>ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.</td><td></td><td></td></tr>
</table></td></tr>
<tr><td>ತೀರ್ಮಾನ</td><td>ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರುಗಳು ದಿನಾಂಕ 06.04.2022ರಿಂದ ದಿನಾಂಕ 13.04.2022ರ ವರೆಗೆ ಶೇರ್–ಇ–ಕಾಶ್ಮೀರ್ ಯುನಿವರ್ಸಿಟಿ ಆಫ್ ಅಗ್ರಿಕಲ್ಚರಲ್ ಸೈನ್ಸಸ್ ಅಂಡ್ ಟೆಕ್ನಾಲಜಿ ಆಫ್ ಕಾಶ್ಮೀರ್ ಶ್ರೀನಗರ ಹಾಗೂ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯಗಳಿಗೆ ಭೇಟಿ ನೀಡಿ ಆ ವಿಶ್ವವಿದ್ಯಾನಿಲಯಗಳ "ಬೆಸ್ಟ್ ಪ್ರಾಕ್ಟೀಸ್" ನಿಯಮಾವಳಿಯನ್ನು ಅಧ್ಯಯನ ಮಾಡಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅನುಷ್ಠಾನಗೊಳಿಸುವ ಸಂಬಂಧ ಸಿಂಡಿಕೇಟ್ ಸದಸ್ಯರು ಹಾಗೂ ಡಾ. ಚಂದ್ರನಾಯಕ್, ಸಂಯೋಜಕರು, ಐಒಇ, ವಿಜ್ಞಾನ ಭವನ, ಮಾನಸಗಂಗೋತ್ರಿ, ಮೈಸೂರು ಇವರು ತಂಡದ ಸಂಯೋಜಕರಾಗಿ ತೆರಳಿ ಕರ್ತವ್ಯ ನಿರ್ವಹಿಸುವುದಕ್ಕೆ ಹಾಗೂ ಈ ಭೇಟಿಗೆ ತಗಲುವ ವಿಮಾನಯಾನ ದರ, ವಾಸ್ತವ್ಯ ಹಾಗೂ ಇನ್ನಿತರ ಪ್ರಾಸಂಗಿಕ ಖರ್ಚು ವೆಚ್ಚಗಳಿಗೆ ಸಿಂಡಿಕೇಟ್ ಸಭೆಯು ಅನುಮೋದಿಸಿತು.</td></tr>
<tr><td>ಸಾಮಾನ್ಯ ಸಭೆ 2022/4.24</td><td>ಡಾ. ಎಸ್.ಟಿ. ರಾಮಚಂದ್ರ, ಮಾಜಿ ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ಕಛೇರಿ ಇವರು ಆರಕ್ಷಕ ಠಾಣೆಗೆ ದೂರು ಸಲ್ಲಿಸಲು ನೀಡಿರುವ ಮನವಿ ಬಗ್ಗೆ.</td></tr>
<tr><td></td><td>ಡಾ. ಎಸ್.ಟಿ. ರಾಮಚಂದ್ರ, ಸಹ ಪ್ರಾಧ್ಯಾಪಕರು, ಮಹಾರಾಜ ಕಾಲೇಜು, ಮೈಸೂರುರವರು ದಿನಾಂಕ 05.04.2022ರಂದು ಆರಕ್ಷಕ ವೃತ್ತ ನಿರೀಕ್ಷಕರು, ಜಯಲಕ್ಷ್ಮಿಪುರಂ ಪೋಲೀಸ್ ಠಾಣೆ, ಮೈಸೂರು ಮಹಾನಗರ, ಮೈಸೂರು ರವರಿಗೆ ಸದರಿಯವರು ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕರಾಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಸಂಶೋಧನಾ ವಿದ್ಯಾರ್ಥಿಗಳು ಕರ್ತವ್ಯಕ್ಕೆ ಅಡ್ಡಿಪಡಿಸಿ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ ಹಾಗೂ ಇ.ಎಂ.ಎಂ.ಆರ್.ಸಿ ಕಚೇರಿಗೆ ಸೇರಿದ ಕಟ್ಟಡದಲ್ಲಿ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕರು ಹಾಗೂ ಕಚೇರಿ ಸಿಬ್ಬಂದಿಯನ್ನು ಅಕ್ರಮ ಬಂಧನದಲ್ಲಿರಿಸಿದುದರ ದೂರನ್ನು ಕುಲಸಚಿವರ ಮೂಲಕ ರವಾನಿಸಲು ಮನವಿ ಸಲ್ಲಿಸಿದ್ದು, ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ದೂರಿನ ಸಂಬಂಧ ಕಾನೂನು ಕ್ರಮ ವಹಿಸುವ ಸಲುವಾಗಿ ಆರಕ್ಷಕ ವೃತ್ತ ನಿರೀಕ್ಷಕರು, ಜಯಲಕ್ಷ್ಮಿಪುರಂ ಪೋಲೀಸ್ ಠಾಣೆ, ಮೈಸೂರು ರವರಿಗೆ ರವಾನಿಸಲಾಗಿದೆ ಎಂಬ ಅಂಶವನ್ನು ಮಾನ್ಯ ಕುಲಪತಿಗಳು ಸಿಂಡಿಕೇಟ್ ಸಭೆಯ ಗಮನಕ್ಕೆ ತಂದರು.</td></tr>
<tr><td>ತೀರ್ಮಾನ</td><td>ಡಾ. ಎಸ್.ಟಿ. ರಾಮಚಂದ್ರ, ಸಹ ಪ್ರಾಧ್ಯಾಪಕರು, ಮಹಾರಾಜ ಕಾಲೇಜು, ಮೈಸೂರುರವರು ದಿನಾಂಕ 05.04.2022ರಂದು ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕರು ಹಾಗೂ ಕಚೇರಿ ಸಿಬ್ಬಂದಿಯನ್ನು ಅಕ್ರಮ ಬಂಧನದಲ್ಲಿರಿಸಿದ್ದುದರ ದೂರನ್ನು ಕುಲಸಚಿವರ ಮೂಲಕ ರವಾನಿಸಲು</td></tr>
</table>

| | |
|---|---|
| | ಮನವಿ ಸಲ್ಲಿಸಿದ್ದು, ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ದೂರಿನ ಸಂಬಂಧ ಕಾನೂನು ಕ್ರಮ ವಹಿಸುವ ಸಲುವಾಗಿ ಆರಕ್ಷಕ ವೃತ್ತ ನಿರೀಕ್ಷಕರು, ಜಯಲಕ್ಷ್ಮಿಪುರಂ ಪೋಲೀಸ್ ಠಾಣೆ, ಮೈಸೂರು ರವರಿಗೆ ರವಾನಿಸಲಾಗಿರುವ ದೂರನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/4.25** | ಪ್ರಾಚ್ಯವಿದ್ಯಾ ಸಂಶೋಧನಾಲಯಕ್ಕೆ ಸಂಬಂಧಪಟ್ಟಂತೆ ರಚಿಸಿರುವ ಅಧಿನಿಯಮದ ಬಗ್ಗೆ. |
| | ಮಾನ್ಯ ಕುಲಪತಿಯವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯವಿದ್ಯಾ ಸಂಶೋಧನಾಲಯದ ಹುದ್ದೆಗಳಿಗೆ ಸಂಬಂಧಪಟ್ಟಂತೆ ನೂತನವಾಗಿ ಅಧಿನಿಯಮವನ್ನು ರಚಿಸುವ ಹಾಗೂ ಅಭಿವೃದ್ದಿಗೊಳಿಸುವ ಹಿತದೃಷ್ಟಿಯಿಂದ ತಜ್ಞರೊಳಗೊಂಡಂತೆ ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯು ರಚಿಸಿರುವ ಕರಡು ಅಧಿನಿಯಮದ ಪ್ರತಿಗಳನ್ನು ಸಿಂಡಿಕೇಟ್ ಸದಸ್ಯರಿಗೆ ನೀಡುವಂತೆ ಕುಲಸಚಿವರಿಗೆ ತಿಳಿಸಿದರು. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯವಿದ್ಯಾ ಸಂಶೋಧನಾಲಯದ ಹುದ್ದೆಗಳಿಗೆ ಸಂಬಂಧಪಟ್ಟಂತೆ ನೂತನವಾಗಿ ಅಧಿನಿಯಮವನ್ನು ರಚಿಸುವ ಹಾಗೂ ಅಭಿವೃದ್ದಿಗೊಳಿಸುವ ಹಿತದೃಷ್ಟಿಯಿಂದ ತಜ್ಞರೊಳಗೊಂಡಂತೆ ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯು ರಚಿಸಿರುವ ಕರಡು ಅಧಿನಿಯಮವನ್ನು Statute Committee ಗೆ ಮಂಡಿಸಲು ತೀರ್ಮಾನಿಸಲಾಯಿತು. |
| **ಸಾಮಾನ್ಯ ಸಭೆ 2022/4.26** | ಶ್ರೀ ಗ್ಯಾವಿನ್ ಜೂಡ್ ವಿಲ್ಸನ್, ಸಹ ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ, ಮಹಾರಾಜ ಕಾಲೇಜು, ಮೈಸೂರು ಇವರಿಗೆ ಆಸ್ಟ್ರೇಲಿಯ ದೇಶಕ್ಕೆ ಹೋಗಿ ಬರಲು ಅನುಮತಿ ನೀಡುವ ಬಗ್ಗೆ. |
| ತೀರ್ಮಾನ | ಶ್ರೀ ಗ್ಯಾವಿನ್ ಜೂಡ್ ವಿಲ್ಸನ್, ಸಹ ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ, ಮಹಾರಾಜ ಕಾಲೇಜು, ಮೈಸೂರು ಇವರು ಸ್ವಂತ ಕೆಲಸದ ನಿಮಿತ್ತ 2022ನೇ ಸೆಪ್ಟೆಂಬರ್ ಹಾಗೂ ಅಕ್ಟೋಬರ್‌ನಲ್ಲಿ ಅವರ ಹಕ್ಕಿನಲ್ಲಿರುವ ರಜೆಯನ್ನು ಉಪಯೋಗಿಸಿಕೊಂಡು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆ ಇಲ್ಲದಂತೆ ಆಸ್ಟ್ರೇಲಿಯ ದೇಶಕ್ಕೆ ಹೋಗಿ ಬರಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/4.27** | ದಿನಸಿ ಪದಾರ್ಥಗಳು ಮತ್ತು ಆಹಾರ ಪದಾರ್ಥಗಳನ್ನು (ತರಕಾರಿಗಳು / ಸೊಪ್ಪು / ಹಣ್ಣುಗಳು / ಹಾಲು ಮತ್ತು ಮೊಸರು / ಮೊಟ್ಟೆ ಮತ್ತು ಚಿಕನ್) ವಾರ್ಷಿಕ ದರ ಒಪ್ಪಂದದ ಆಧಾರದ ಮೇಲೆ ಸರಬರಾಜು ಮಾಡುತ್ತಿರುವ ಶ್ರೀ ಬಿ.ಹೆಚ್. ಮಾಯಿಗಯ್ಯ, ಮೆ. : ಸೌಮ್ಯಶ್ರೀ ಟ್ರೇಡರ್ಸ್, ಮಂಡ್ಯರವರನ್ನು ತಾತ್ಕಾಲಿಕವಾಗಿ ಮುಂದುವರೆಸುವ ಬಗ್ಗೆ. |
| ತೀರ್ಮಾನ | ಬೋಜನ ವ್ಯವಸ್ಥೆಗೆ ಅವಶ್ಯಕವಾಗಿ ಬೇಕಾಗಿರುವ ದಿನಸಿ ಪದಾರ್ಥಗಳು ಮತ್ತು ಆಹಾರ ಪದಾರ್ಥಗಳನ್ನು (ತರಕಾರಿಗಳು / ಸೊಪ್ಪು / ಹಣ್ಣುಗಳು / ಹಾಲು ಮತ್ತು ಮೊಸರು / ಮೊಟ್ಟೆ ಮತ್ತು ಚಿಕನ್) ಇ–ಪ್ರಕ್ಯೂರ್‌ಮೆಂಟ್ ಮೂಲಕ ವಾರ್ಷಿಕ ದರ ಒಪ್ಪಂದದ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಖರೀದಿಸಲು ಆಹ್ವಾನಿಸಿರುವ ಅಲ್ಪಾವಧಿ ಮರು ಟೆಂಡರ್ ಪ್ರಕ್ರಿಯೆಯು ಜಾರಿಯಲ್ಲಿರುವುದರಿಂದ, ಸದರಿ ಎರಡೂ ಮರು ಟೆಂಡರ್ ಪ್ರಕ್ರಿಯೆಗಳು ಪೂರ್ಣಗೊಂಡು ಹೊಸ ಟೆಂಡರ್‌ದಾರರು ಆಯ್ಕೆಗೊಳ್ಳುವವರೆಗೂ ಶ್ರೀ ಬಿ.ಹೆಚ್.ಮಾಯಿಗಯ್ಯ, ಮೆ:ಸೌಮ್ಯಶ್ರೀ ಟ್ರೇಡರ್ಸ್, ಮಂಡ್ಯ ರವರಿಂದ ಖರೀದಿಸಲು ತಾತ್ಕಾಲಿಕವಾಗಿ ಮುಂದುವರಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |

| | |
|---|---|
| ಸಾಮಾನ್ಯ ಸಭೆ 2022/4.28 | 2020–21ನೇ ಸಾಲಿನ ಕಾಲೇಜು ವಾರ್ಷಿಕ ಸಂಚಿಕೆಗಳಿಗೆ ಬಹುಮಾನಗಳನ್ನು ನೀಡುವ ಬಗ್ಗೆ. |
| ತೀರ್ಮಾನ | 2020–21ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯವು ರಚಿಸಿರುವ ತಜ್ಞರ ಸಮಿತಿಯು ಆಯ್ಕೆ ಮಾಡುವ ಉತ್ತಮ ಕಾಲೇಜು ವಾರ್ಷಿಕ ಸಂಚಿಕೆಗಳಿಗೆ ಪ್ರಥಮ ಬಹುಮಾನಕ್ಕೆ ರೂ.43,500/–ರಂತೆ, ದ್ವಿತೀಯ ಬಹುಮಾನಕ್ಕೆ ರೂ.33,350/–ರಂತೆ ಹಾಗೂ ತೃತೀಯ ಬಹುಮಾನಕ್ಕೆ ರೂ.23,150/–ರಂತೆ ವಾರ್ಷಿಕ ಸಂಚಿಕೆಗಳಿಗೆ ಬಹುಮಾನಗಳನ್ನು ನೀಡಲು ರೂ.1,00,000/–(ಒಂದು ಲಕ್ಷ ರೂಪಾಯಿಗಳು ಮಾತ್ರ)ಗಳನ್ನು ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕರಿಗೆ ಮುಂಗಡ ಹುಂಡಿಯ ಮೂಲಕ ಪಡೆಯಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2022/4.29 | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲಾಗಿರುವ ಕ್ರಿಶ್ಚಿಯಾನಿಟಿ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲಾಗಿರುವ ಕ್ರಿಶ್ಚಿಯಾನಿಟಿ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಸಂಬಂಧ ಮೂವರು ಪ್ರಾಧ್ಯಾಪಕರಲ್ಲಿ ಒಬ್ಬರನ್ನು ನೇಮಕ ಮಾಡಿಕೊಳ್ಳುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2022/4.30 | ರೂ. 2.00 ಕೋಟಿ ಮಿತಿಗೊಳಪಟ್ಟು "ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ" ಇವರಿಂದ ಮೈಸೂರು ವಿಶ್ವವಿದ್ಯಾನಿಲಯದ ತೋಟಗಾರಿಕಾ ವಿಭಾಗಕ್ಕೆ ಸೇವೆಗಳನ್ನು ಪಡೆಯುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ತೋಟಗಾರಿಕಾ ವಿಭಾಗಕ್ಕೆ ಸೇವೆಗಳನ್ನು ಪಡೆಯುವ ಸಂಬಂಧ ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ.17/ಶಾಸನ 2021 ದಿನಾಂಕ 06.04.2021ರಲ್ಲಿ "ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ" ಕಾಮಗಾರಿಗಳಿಗೆ ಸ್ವಯಂ ಕಾರ್ಯಗತಗೊಳಿಸುವ ಷರತ್ತಿಗೆ ಒಳಪಟ್ಟು, ರೂ.2.00 ಕೋಟಿ ರೂಪಾಯಿಗಳಿಗೆ ಮೀರದಿರುವ ಮೌಲ್ಯದ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ಎಲ್ಲಾ ವಿಧದ ನಿರ್ಮಾಣ ಕಾಮಗಾರಿಗಳನ್ನು ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ ಇವರ ಸೇವೆಯನ್ನು ಉಪಯೋಗಿಸಿಕೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2022/4.31 | ಮೈಸೂರು ವಿಶ್ವವಿದ್ಯಾನಿಲಯದ ರಸಾಯನಶಾಸ್ತ್ರ ಅಧ್ಯಯನ ವಿಭಾಗ ಮತ್ತು ಪ್ರಕೃತಿ ಪ್ರಾಡಕ್ಟ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ನಡುವೆ ಮಾಡಿಕೊಂಡಿರುವ ಒಡಂಬಡಿಕೆಯ (MoU) ಬಗ್ಗೆ ಅನುಸಮರ್ಥನೆಗಾಗಿ. |
| ತೀರ್ಮಾನ | ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕಾಯ್ದಿರಿಸಿ, ಮೈಸೂರು ವಿಶ್ವವಿದ್ಯಾನಿಲಯದ ರಸಾಯನಶಾಸ್ತ್ರ ಅಧ್ಯಯನ ವಿಭಾಗ ಮತ್ತು ಪ್ರಕೃತಿ ಪ್ರಾಡಕ್ಟ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರ ನಡುವೆ ಜಂಟಿ ಸಂಶೋಧನೆ ನಡೆಸುವ ಉದ್ದೇಶದಿಂದ ಮಾಡಿಕೊಂಡಿರುವ ಒಡಂಬಡಿಕೆಯನ್ನು(MoU) ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2022/4.32 | ಕರ್ನಾಟಕ ಪೊಲೀಸ್ ಅಕಾಡೆಮಿ, ಮೈಸೂರು ಮತ್ತು ಮೈಸೂರು ವಿಶ್ವವಿದ್ಯಾನಿಲಯದ ನಡುವೆ ಮಾಡಿಕೊಂಡಿರುವ ಒಡಂಬಡಿಕೆಯ (MoU) ಬಗ್ಗೆ ಅನುಸಮರ್ಥನೆಗಾಗಿ. |

| | |
|---|---|
| | ಶ್ರೀ ಎಂ.ಬಿ.ಗಪ್ಪಣ್ಣ ರವರು ಮಾತನಾಡಿ ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಇತರೆ ಸಂಸ್ಥೆಗಳು ಒಡಂಬಡಿಕೆ ಮಾಡುವಾಗ ಸಿಂಡಿಕೇಟ್ ಸದಸ್ಯರನ್ನು ಸಹ ಆಹ್ವಾನಿಸಬೇಕಾಗಿ ಮನವಿ ಮಾಡಿಕೊಂಡರು.<br><br>ಇದಕ್ಕುತ್ತರವಾಗಿ ಮಾನ್ಯ ಕುಲಪತಿಗಳು ಮಾತನಾಡಿ, ಇನ್ನು ಮುಂದೆ ಸಿಂಡಿಕೇಟ್ ಸದಸ್ಯರನ್ನು ಸಹ ಆಹ್ವಾನಿಸುವುದಾಗಿ ತಿಳಿಸಿದರು. |
| ತೀರ್ಮಾನ | ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕಾಯ್ದಿರಿಸಿ, "ಸೆಂಟರ್ ಆಫ್ ಎಕ್ಸಲೆನ್ಸ್" ಅನ್ನು ಸ್ಥಾಪಿಸುವ ಉದ್ದೇಶಕ್ಕಾಗಿ ಕರ್ನಾಟಕ ಪೊಲೀಸ್ ಅಕಾಡೆಮಿ, ಮೈಸೂರು ಮತ್ತು ಮೈಸೂರು ವಿಶ್ವವಿದ್ಯಾನಿಲಯದ ನಡುವೆ ಮಾಡಿಕೊಂಡಿರುವ ಒಡಂಬಡಿಕೆಯ (MoU) ನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2022/4.33 | ಗುಪ್ತ ಕಾಲೇಜ್ ಆಫ್ ಡಿಸೈನ್ C/o ಆರ್.ಕೆ. ಎಜುಕೇಷನ್ ಇನ್ಸಿಟ್ಯೂಷನ್, S.No. 192/2, ಕೆ. ಹೊನ್ನಲಗೆರೆ, ಮದ್ದೂರು ತಾ., ಮಂಡ್ಯ ಜಿಲ್ಲೆ–571 433 ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ 03 ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಲು ಮಾನ್ಯತೆ ಕೋರಿದ್ದ ಸಂಬಂಧ ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| | ಪ್ರೊ. ವೆಂಕಟೇಶ್‌ಕುಮಾರ್‌ರವರು ಮಾತನಾಡಿ, ಅನಿಮೇಷನ್ ತಜ್ಞರು ಯಾರು? ಹಾಗೂ ಈ ಒಂದು ಸಮಿತಿಗೆ ಡೀನ್‌ಗಳನ್ನು ನೇಮಿಸಿರುವುದಿಲ್ಲ ಇದಕ್ಕೆ ಕಾರಣ ಏನು ಎಂದು ಪ್ರಶ್ನಿಸಿದರು?<br><br>ಇದಕ್ಕುತ್ತರವಾಗಿ ಮಾನ್ಯ ಕುಲಪತಿಗಳು ಮಾತನಾಡಿ, ಗಣಕ ವಿಜ್ಞಾನದ ಪ್ರಾಧ್ಯಾಪಕರಾದ ಪ್ರೊ. ಸುರೇಶ್‌ರವರನ್ನು ನೇಮಿಸಿದ್ದು, Specialized programme ಪ್ರಾರಂಭಿಸುವುದಕ್ಕೆ ಡೀನ್‌ಗಳನ್ನು ಸಮಿತಿಯಲ್ಲಿ ನೇಮಿಸಬೇಕೆಂದು ಯಾವುದೇ ನಿಯಮಗಳು ಇರುವುದಿಲ್ಲ ಎಂದು ತಿಳಿಸಿದರು. |
| ತೀರ್ಮಾನ | ಗುಪ್ತ ಕಾಲೇಜ್ ಆಫ್ ಡಿಸೈನ್ C/o ಆರ್.ಕೆ. ಎಜುಕೇಷನ್ ಇನ್ಸಿಟ್ಯೂಷನ್, S.No. 192/2, ಕೆ. ಹೊನ್ನಲಗೆರೆ, ಮದ್ದೂರು ತಾ., ಮಂಡ್ಯ ಜಿಲ್ಲೆ–571 433 ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ 03 ಹೊಸ ಕೋರ್ಸ್‌ಗಳನ್ನು 40 ವಿದ್ಯಾರ್ಥಿಗಳ ಪ್ರವೇಶಾತಿ ಮಿತಿಯೊಂದಿಗೆ 2022–23ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸುವ ಸಂಬಂಧ ಸ್ಥಳೀಯ ವಿಚಾರಣಾ ಸಮಿತಿಯು ಭೇಟಿ ನೀಡಿ ಸಂಸ್ಥೆಯಲ್ಲಿನ ಮೂಲಭೂತ ಸೌಲಭ್ಯಗಳು ಹಾಗೂ ಇತರೆ ಅಗತ್ಯ ಮಾಹಿತಿಗಳನ್ನು ಪರಿಶೀಲಿಸಿ, ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ವರದಿ ನೀಡಿರುವುದನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2022/4.34 | B.Com. (Financial Management) ಅಧ್ಯಯನ ಮಂಡಳಿಯನ್ನು ಪುನರ್‌ರಚಿಸಿರುವ ಬಗ್ಗೆ– ಅನುಸಮರ್ಥನೆಗಾಗಿ. |

| | |
|---|---|
| | ಮಾನ್ಯ ಕುಲಪತಿಯವರು ಮಾತನಾಡಿ, MYCAS College of Professional Studies, Metagalli, Mysuru ಇವರು Specialized programme ಅಡಿಯಲ್ಲಿ ಹೊಸದಾಗಿ 2022-23ನೇ ಸಾಲಿನಿಂದ B.Com. (Financial Management) ಕೋರ್ಸ್ ಅನ್ನು ಪ್ರಾರಂಭಿಸಲು ಅನುಮತಿ ಕೋರಿರುತ್ತಾರೆ ಇದರ ಸಂಬಂಧವಾಗಿ ಅಧ್ಯಯನ ಮಂಡಳಿಯನ್ನು ರಚಿಸುವಂತೆ ಕಾಲೇಜಿನವರು ಕೋರಿದ್ದು, ಅದರಂತೆ ನಾವು ಅಧ್ಯಯನ ಮಂಡಳಿಯನ್ನು ರಚಿಸಿ ಅಧಿಸೂಚನೆಯನ್ನು ಹೊರಡಿಸಿರುತ್ತೇವೆ ಎಂದು ತಿಳಿಸಿದರು.<br><br>ಪ್ರೊ. ವೆಂಕಟೇಶ್‌ಕುಮಾರ್‌ರವರು ಮಾತನಾಡಿ, ಅಧ್ಯಯನ ಮಂಡಳಿ ರಚನೆಯಾಗಿರುವುದು ಸರಿಯಷ್ಟೇ, ಆದರೆ ವಿಶ್ವವಿದ್ಯಾನಿಲಯದ ನಿಯಮಗಳು ಉಲ್ಲಂಘನೆಯಾಗುವ ಸಂಭವವಿರುತ್ತದೆ ಎಂದು ಪ್ರಶ್ನಿಸಿದರು?<br><br>ಮಾನ್ಯ ಕುಲಪತಿಯವರು ಮಾತನಾಡಿ, ವಿಶ್ವವಿದ್ಯಾನಿಲಯದ ಸದಸ್ಯರೊಬ್ಬರನ್ನು ಅಧ್ಯಯನ ಮಂಡಳಿಯಲ್ಲಿ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ ಎಂದು ತಿಳಿಸಿದರು. |
| **ತೀರ್ಮಾನ** | ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕಾಯ್ದಿರಿಸಿ, MYCAS College of Professional Studies, Metagalli, Mysuru ಅವರು Specialized Programe ಅಡಿಯಲ್ಲಿ 2022-23ನೇ ಸಾಲಿನಿಂದ B.Com. (Financial Management) ಕೋರ್ಸನ್ನು ಪ್ರಾರಂಭಿಸಲು ಅಧ್ಯಯನ ಮಂಡಳಿಯನ್ನು ಪುನರ್‌ರಚಿಸಿ ಹೊರಡಿಸಿರುವ ಅಧಿಸೂಚನೆಯನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| **ಸಾಮಾನ್ಯ ಸಭೆ 2022/4.35** | 2021-22ನೇ ಸಾಲಿನಲ್ಲಿ, ಸಾಮಾನ್ಯ 'ರೆವಿನ್ಯೂ ಖಾತೆ (GRA)' ಮತ್ತು 'ಅಮಾನತ್ತು ಖಾತೆ (SUSPENSE A/C)'ಗಳನ್ನು ಕ್ರಮವಾಗಿ 'ಮೈಸೂರು ವಿಶ್ವವಿದ್ಯಾನಿಲಯದ ಖಾತೆ (University of Mysore A/C)' ಮತ್ತು 'ಮೈಸೂರು ವಿಶ್ವವಿದ್ಯಾನಿಲಯದ ಕಡಿತದ ಖಾತೆ (University of Mysore deduction A/C)' ಹೆಸರಿಗೆ ಬದಲಾಯಿಸಿರುವ ವಿಷಯವನ್ನು 'ಸಿಂಡಿಕೇಟ್ ಸಭೆ'ಯ ಅನುಮೋದನೆ ಹಾಗೂ ಅನುಸಮರ್ಥನೆಗಾಗಿ ಮಂಡಿಸಲಾಗಿದೆ. |
| | ಪ್ರೊ. ವೆಂಕಟೇಶ್‌ಕುಮಾರ್‌ರವರು ಮಾತನಾಡಿ, SUSPENSE A/C and University of Mysore A/C ಇದರ ನಡುವೆ ಇರುವ ವ್ಯತ್ಯಾಸವನ್ನು ಕೇಳಿದರು.<br><br>ಇದಕ್ಕುತ್ತರವಾಗಿ ಹಣಕಾಸು ಅಧಿಕಾರಿಯವರು ಮಾತನಾಡಿ, SUSPENSE A/C and University of Mysore A/C ಈ ಎರಡಕ್ಕೂ ಯಾವುದೇ ರೀತಿಯ ವ್ಯತ್ಯಾಸಗಳು ಇರುವುದಿಲ್ಲ, ಕರ್ತವ್ಯದಲ್ಲೂ ಯಾವುದೇ ವ್ಯತ್ಯಾಸಗಳು ಇರುವುದಿಲ್ಲ. ಆದಾಯ ತೆರಿಗೆ ಇಲಾಖೆ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಹಾಗೂ ಲೆಕ್ಕಪರಿಶೋಧಕರ ಸಲಹೆಯಂತೆ, ಮೈಸೂರು ವಿಶ್ವವಿದ್ಯಾನಿಲಯದ ಹಣಕಾಸಿನ ವಹಿವಾಟುಗಳ ಹಿತದೃಷ್ಟಿಯಿಂದ ಸಾಮಾನ್ಯ ರೆವಿನ್ಯೂ ಖಾತೆಯನ್ನು ಮೈಸೂರು ವಿಶ್ವವಿದ್ಯಾನಿಲಯದ ಖಾತೆ (University of Mysore A/C) ಎಂದು ಹಾಗೂ SUSPENSE A/C ಖಾತೆಯನ್ನು ಮೈಸೂರು ವಿಶ್ವವಿದ್ಯಾನಿಲಯದ ಕಡಿತದ ಖಾತೆ (University of Mysore |

| | |
|---|---|
| | deduction A/C) ಎಂಬ ಹೆಸರಿಗೆ ಖಾತೆಗಳ ಶಿರೋನಾಮೆಯನ್ನು ಬದಲಾಯಿಸಲಾಗಿರುತ್ತದೆ ಎಂದು ವಿವರಿಸಿದರು. |
| ತೀರ್ಮಾನ | 2021-22ನೇ ಸಾಲಿನಲ್ಲಿ, ಮೈಸೂರು ವಿಶ್ವವಿದ್ಯಾನಿಲಯದ ಹಣಕಾಸಿನ ವಹಿವಾಟುಗಳ ಹಿತದೃಷ್ಟಿಯಿಂದ ಹಾಗೂ ತೆರಿಗೆ ಇಲಾಖೆ ಮತ್ತು ಎಸ್‌ಬಿಐ ಸಲಹೆ ಮೇರೆಗೆ ವಿಶ್ವವಿದ್ಯಾನಿಲಯದ ಬ್ಯಾಂಕ್ ಖಾತೆಗಳಾದ ಸಾಮಾನ್ಯ 'ರೆವಿನ್ಯೂ ಖಾತೆ (GRA)' ಮತ್ತು 'ಅಮಾನತ್ತು ಖಾತೆ (SUSPENSE A/C)'ಗಳನ್ನು ಕ್ರಮವಾಗಿ 'ಮೈಸೂರು ವಿಶ್ವವಿದ್ಯಾನಿಲಯದ ಖಾತೆ (University of Mysore A/C)' ಮತ್ತು 'ಮೈಸೂರು ವಿಶ್ವವಿದ್ಯಾನಿಲಯದ ಕಡತದ ಖಾತೆ (University of Mysore deduction A/C)' ಎಂಬ ಹೆಸರಿಗೆ ಖಾತೆಗಳ ಶಿರೋನಾಮೆಯನ್ನು ಬದಲಾಯಿಸಲಾಗಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2022/4.36 | ಪ್ರೊ. ಎಂ. ಕೃಷ್ಣಪ್ಪ, ನಿವೃತ್ತ ಪ್ರಾಧ್ಯಾಪಕರು, ಅನ್ವಯಿಕ ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಲ್ಲಿಸಿರುವ ಸೇವಾವಧಿಯ ಪಿಂಚಣಿ ಸೌಲಭ್ಯಗಳನ್ನು ವರ್ಗಾವಣೆ ಮಾಡುವ ಬಗ್ಗೆ. |
| | ಪ್ರೊ. ವೆಂಕಟೇಶ್‌ಕುಮಾರ್‌ರವರು ಮಾತನಾಡಿ, ಈ ಪ್ರಕರಣದಂತೆ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಯಾವುದಾದರೂ ಪ್ರಕರಣಗಳು ಹಿಂದೆ ನಡೆದಿದೆಯಾ ಎಂದು ಪ್ರಶ್ನಿಸಿದರು?.<br>ಇದಕ್ಕುತ್ತರವಾಗಿ ಮಾನ್ಯ ಕುಲಪತಿಯವರು ಮಾತನಾಡಿ, ಸಾಕಷ್ಟು ಪ್ರಕರಣಗಳು ನಡೆದಿದ್ದು, ಸರ್ಕಾರದಿಂದ ಅನುಮತಿ ಪಡೆದುಕೊಂಡು ಬಂದರೆ ನಾವು ಅವರಿಗೆ ಸೇವಾವಧಿಯ ಪಿಂಚಣಿ ಹಾಗೂ ಇತರ ಸೌಲಭ್ಯಗಳನ್ನು ನಿಯಮಾನುಸಾರ ವರ್ಗಾಯಿಸುತ್ತೇವೆ ಎಂದು ತಿಳಿಸಿದರು. |
| ತೀರ್ಮಾನ | ಮಾನ್ಯ ಕುಲಪತಿಯವರು, ಸರ್ಕಾರದ ನಿರ್ದೇಶಾನುಸಾರ ಕ್ರಮವಹಿಸಲು ಆದೇಶಿಸಿದ ಹಿನ್ನೆಲೆಯಲ್ಲಿ ಪ್ರೊ. ಎಂ. ಕೃಷ್ಣಪ್ಪ, ನಿವೃತ್ತ ಪ್ರಾಧ್ಯಾಪಕರು, ಅನ್ವಯಿಕ ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ ಇವರು ದಿನಾಂಕ 03.10.1988 ರಿಂದ 02.10.1993 ಉಪನ್ಯಾಸಕರಾಗಿ ಹಾಗೂ ದಿನಾಂಕ 03.10.1993 ರಿಂದ 21.05.1998ರ ವರೆಗೆ ಹಿರಿಯ ಶ್ರೇಣಿ ಉಪನ್ಯಾಸಕರಾಗಿ ಮೈಸೂರು ವಿಶ್ವವಿದ್ಯಾನಿಲಯದ ಅನ್ವಯಿಕ ಸಸ್ಯಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಸಲ್ಲಿಸಿರುವ ಸೇವಾವಧಿಯ ಪಿಂಚಣಿ ಹಾಗೂ ಇತರ ಸೌಲಭ್ಯಗಳನ್ನು ನಿಯಮಾನುಸಾರ ಕುವೆಂಪು ವಿಶ್ವವಿದ್ಯಾನಿಲಯಕ್ಕೆ ವರ್ಗಾಹಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2022/4.37 | ವಿಶ್ವವಿದ್ಯಾನಿಲಯದ ಯುಜಿಸಿ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ ಹಾಗೂ ಕೇಂದ್ರದಲ್ಲಿನ ಬೋಧಕ ಸಿಬ್ಬಂದಿ ಸೇವೆಯನ್ನು ಮುಂದುವರೆಸುವ ಬಗ್ಗೆ. |
| ತೀರ್ಮಾನ | ಯುಜಿಸಿ–ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ ಹಾಗೂ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಯಾದ ಡಾ. ನಂಜುಂಡಸ್ವಾಮಿ, ತಾತ್ಕಾಲಿಕ ಸಹಾಯಕ ಪ್ರಾಧ್ಯಪಕರು (Tenure Basis) ಇವರ ಸೇವೆಯನ್ನು ದಿನಾಂಕ 31.03.2023ರ ವರೆಗೆ ಮುಂದುವರೆಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2022/4.38 | ಡಾ. ಈ.ಸಿ. ನಿಂಗರಾಜ ಗೌಡ, ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ವಿಶ್ವವಿದ್ಯಾನಿಲಯದ ಎಲ್ಲಾ ಹಾಸ್ಟೆಲ್‌ಗಳಲ್ಲಿರುವ ಅನಧಿಕೃತ ವ್ಯಕ್ತಿಗಳನ್ನು ಕೂಡಲೇ ಹೊರ |

| | |
|---|---|
| | ಹಾಕಬೇಕೆಂದು ಮತ್ತು ಅಲ್ಲಿ ನಡೆದಿರುವ ಆರ್ಥಿಕ ಅವ್ಯವಹಾರಗಳ ಬಗ್ಗೆ ತನಿಖೆ ಮಾಡಬೇಕೆಂದು ಕೋರಿರುವ ಬಗ್ಗೆ. |
| | ಡಾ. ಈ.ಸಿ ನಿಂಗರಾಜ ಗೌಡರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ 13 ವಿದ್ಯಾರ್ಥಿನಿಲಯಗಳಲ್ಲಿ ಅನಧಿಕೃತ ವ್ಯಕ್ತಿಗಳು ವಾಸವಾಗಿರುವುದು ಹಾಗೂ ಅಲ್ಲಿ ಆರ್ಥಿಕ ಅವ್ಯವಹಾರಗಳು ನಡೆಯುತ್ತಿರುವ ಕುರಿತು ಸಮಿತಿ ರಚಿಸಿದ್ದು ಸಮಿತಿಯು ಒಂದು ಸಭೆಯನ್ನು ನಡೆಸಲಾಗಿದ್ದು, ಪೂರ್ಣವಾಗಿ ವರದಿ ನೀಡಿರುವುದಿಲ್ಲ ಎಂದು ತಿಳಿಸಿದರು.<br><br>ಪ್ರೊ. ರಮೇಶ್‌ರವರು ಮಾತನಾಡಿ, ವಿದ್ಯಾರ್ಥಿನಿಲಯಗಳಲ್ಲಿ ಅನಧಿಕೃತವಾಗಿ ವಾಸ ಮಾಡುತ್ತಿರುವುದು ಕಂಡು ಬಂದಿದೆ ಇದನ್ನು ತಡೆಯಲು ಅಲ್ಲಿಯ ವಿದ್ಯಾರ್ಥಿಗಳು ಸಹಕರಿಸಬೇಕಾಗಿದೆ, ಆದರೆ ಅಲ್ಲಿಯ ವಿದ್ಯಾರ್ಥಿಗಳಿಗೆ ಬೆದರಿಸಿರುವುದರಿಂದ ಯಾವುದೇ ವಿದ್ಯಾರ್ಥಿಗಳು ದೂರು ನೀಡುತ್ತಿಲ್ಲ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಹಾಗೂ ಡಾ. ಸೈಯದ್ ಕಾಝು ಮೊಹಿದ್ದೀನ್‌ರವರು ಮಾತನಾಡಿ, ಮಾಜಿ ಸೈನಿಕ (Ex-serviceman) ರನ್ನು ನಿಯೋಜಿಸಿದ್ದಲ್ಲಿ ಅನಧಿಕೃತವಾಗಿ ವಿದ್ಯಾರ್ಥಿ ನಿಲಯದಲ್ಲಿ ವಾಸ ಮಾಡುತ್ತಿರುವವರನ್ನು ನಿಯಂತ್ರಿಸಬಹುದು ಎಂದು ಸಲಹೆ ನೀಡಿದರು. ಇದಕ್ಕೆ ಎಲ್ಲಾ ಸದಸ್ಯರು ಸರ್ವಾನುಮತದಿಂದ ಒಪ್ಪಿದರು. |
| **ತೀರ್ಮಾನ** | ಸಮಿತಿಯು ಪೂರ್ಣವಾಗಿ ಸಭೆಗಳನ್ನು ನಡೆಸಿಲ್ಲದಿರುವುದರಿಂದ ವಿಷಯವನ್ನು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಸೂಕ್ತ ಕ್ರಮ ಕೈಗೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು. |
| **ಸಾಮಾನ್ಯ ಸಭೆ 2022/4.39** | 2021–22ನೇ ಶೈಕ್ಷಣಿಕ ಸಾಲಿನಲ್ಲಿ ಎನ್.ಎಸ್.ಎಸ್./ಎನ್.ಸಿ.ಸಿ./ಕ್ರೀಡೆ ಮತ್ತು ಇತರೆ ವಿಶೇಷ ಖೋಟದ ಅಡಿಯಲ್ಲಿ ಸೀಟುಗಳನ್ನು ಹಂಚಲು ಕಾರ್ಯನಿರ್ವಹಿಸಿದ ಸಿಬ್ಬಂದಿ ವರ್ಗದವರಿಗೆ ಗೌರವಧನ ನೀಡಿರುವ ಬಗ್ಗೆ. |
| **ತೀರ್ಮಾನ** | 2021–22ನೇ ಶೈಕ್ಷಣಿಕ ಸಾಲಿನಲ್ಲಿ ಎನ್.ಎಸ್.ಎಸ್./ಎನ್.ಸಿ.ಸಿ./ಕ್ರೀಡೆ ಮತ್ತು ಇತರೆ ವಿಶೇಷ ಖೋಟದ ವಿವಿಧ ಸ್ನಾತಕೋತ್ತರ ಪದವಿಗಳಿಗೆ ಪ್ರವೇಶಾತಿ ಕಲ್ಪಿಸುವ ಸಂಬಂಧ ಅರ್ಜಿಗಳನ್ನು ಪರಿಶೀಲಿಸಿ ಸಮಿತಿಯ ಮುಂದೆ ಸಲ್ಲಿಸಲು ಕಛೇರಿ ವೇಳೆ ಹಾಗೂ ಕೆಲವು ರಜಾ ದಿನಗಳಂದು ಪ್ರವೇಶ ಕಾರ್ಯಗಳನ್ನು ನಿರ್ವಹಿಸಿರುವ ಸಿಬ್ಬಂದಿ ವರ್ಗದವರಿಗೆ ಮಾನ್ಯ ಕುಲಪತಿಗಳು ರೂ.1.25 ಲಕ್ಷಗಳನ್ನು (ಒಂದು ಲಕ್ಷದ ಇಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ) ಗೌರವಧನ ಮಂಜೂರು ಮಾಡಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| **ಸಾಮಾನ್ಯ ಸಭೆ 2022/4.40** | ಪತ್ರಿಕೋದ್ಯಮ ಮತ್ತು ಸಂವಹನ ವಿಭಾಗದ ದ್ವಿತೀಯ ವರ್ಷದ ವಿದ್ಯಾರ್ಥಿನಿ ಪಲ್ಲವಿ ಸಿ.ಎನ್. ಇವರ ದೂರಿನ ಬಗ್ಗೆ. |
| | ಕುಲಸಚಿವರು ಮಾತನಾಡಿ, ಪತ್ರಿಕೋದ್ಯಮ ಮತ್ತು ಸಂವಹನ ವಿಭಾಗದ ದ್ವೀತಿಯ ವರ್ಷದ ವಿದ್ಯಾರ್ಥಿನಿಯಾದ ಪಲ್ಲವಿಯವರು ನೀಡಿರುವ ದೂರಿಗೆ ಸಂಬಂಧಪಟ್ಟಂತೆ, ವಿಶ್ವವಿದ್ಯಾನಿಲಯದ ಆಂತರಿಕ ದೂರು ಸಮಿತಿಯ ಅಧ್ಯಕ್ಷರು ಸಭೆಗಳನ್ನು ನಡೆಸಿ ನಡವಳಿ/ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ನೀಡಿರುತ್ತಾರೆ ಎಂದು ಸಭೆಯ ಗಮನಕ್ಕೆ ತಂದರು. ಸದರಿ ನಡವಳಿ/ವರದಿಯನ್ನು ಸಿಂಡಿಕೇಟ್ ಸಭೆಯ ಸದಸ್ಯರ ಸಮ್ಮುಖದಲ್ಲಿ ಓದಲಾಯಿತು. |

**ತೀರ್ಮಾನ**

ಪತ್ರಿಕೋದ್ಯಮ ಮತ್ತು ಸಂವಹನ ವಿಭಾಗದ ದ್ವಿತೀಯ ವರ್ಷದ ವಿದ್ಯಾರ್ಥಿನಿ ಪಲ್ಲವಿ ಸಿ.ಎನ್. ಇವರ ದೂರಿನ ವಿಷಯದ ಕುರಿತು ಆಂತರಿಕ ದೂರು ಸಮಿತಿ ನೀಡಿರುವ ವರದಿಯನ್ನು ಕಾನೂನು ಸಲಹೆಗಾರರ ಅಭಿಪ್ರಾಯಕ್ಕಾಗಿ ಮಂಡಿಸಿ ಮುಂದಿನ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು.

**ಸಾಮಾನ್ಯ ಸಭೆ 2022/4.41**

ಬಿ.ಎಡ್. ಪರೀಕ್ಷಾ ಕಾರ್ಯಗಳಲ್ಲಿ ಭಾಗವಹಿಸುವ ಅಧ್ಯಾಪಕರು/ಶಿಕ್ಷಕರುಗಳಿಗೆ ಸಂಭಾವನೆ ಭತ್ಯೆಗಳ ಪರಿಷ್ಕರಣೆ ಬಗ್ಗೆ.

ಕುಲಸಚಿವ (ಪರೀಕ್ಷಾಂಗ)ರವರು ಮಾತನಾಡಿ, ಬಿ.ಎಡ್ ಪದವಿ ಪ್ರಾಯೋಗಿಕ ಪಾಠ ಬೋಧನಾ ವೀಕ್ಷಣೆಯ ಸಂಭಾವನೆ/ ಭತ್ಯೆಗಳು ಅತಿ ಕಡಿಮೆಯಾಗಿದೆ ಎಂದು ತಿಳಿಸಿದ ಹಿನ್ನೆಲೆಯಲ್ಲಿ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಕುಲಪತಿಗಳು ಸಮಿತಿಯನ್ನು ರಚಿಸಿದ್ದು ಸಮಿತಿಯ ವರದಿಯನ್ನು ನೀಡಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

ಡಾ. ನಾಗರಾಜುರವರು ಮಾತನಾಡಿ ಬಿ.ಎಡ್ ಪದವಿ ಪ್ರಾಯೋಗಿಕ ಪಾಠ ಬೋಧನಾ ವೀಕ್ಷಣೆಯ ಸಂಭಾವನೆ/ ಭತ್ಯೆಗಳು ತೀರ ಕಡಿಮೆ ಇದೆ ಎಂದು ನನ್ನಲ್ಲಿ ಅಧ್ಯಾಪಕರು ಮನವಿ ಮಾಡಿಕೊಂಡಿರುತ್ತಾರೆ ಆದ್ದರಿಂದ ಮಾನ್ಯ ಕುಲಪತಿಗಳು ಬಿ.ಎಡ್.ಪದವಿ ಪ್ರಾಯೋಗಿಕ ಪಾಠ ಬೋಧನಾ ವೀಕ್ಷಣೆಗೆ ಸಮಿತಿ ನಿಗದಿಪಡಿಸಿದ ದರಪಟ್ಟಿಯನ್ನು ಮತ್ತೊಮ್ಮೆ ಪರಿಶೀಲಿಸಬೇಕಾಗಿ ಮನವಿ ಮಾಡಿಕೊಂಡರು.

ಮಾನ್ಯ ಕುಲಪತಿಯವರು ಇದಕ್ಕುತ್ತರವಾಗಿ ಒಂದು ಟಿಪ್ಪಣಿಯನ್ನು ನೀಡುವಂತೆ ಡಾ.ನಾಗರಾಜುರವರಿಗೆ ಸಲಹೆ ನೀಡಿದರು. ಮುಂದುವರೆದು ಕುಲಸಚಿವ (ಪರೀಕ್ಷಾಂಗ) ರವರೊಂದಿಗೆ ಸದರಿ ವಿಷಯದ ಬಗ್ಗೆ ಪ್ರಸ್ತಾಪ ಮಾಡಲು ತಿಳಿಸಿದರು.

**ತೀರ್ಮಾನ**

ಬಿ.ಎಡ್ ಪದವಿ ಪ್ರಾಯೋಗಿಕ ಪಾಠ ಬೋಧನಾ ವೀಕ್ಷಣೆಯ ಸಂಭಾವನೆ/ ಭತ್ಯೆಗಳನ್ನು ಕೆಳಕಂಡಂತೆ ದರಪಟ್ಟಿಯನ್ನು ಪರಿಷ್ಕರಿಸುವಂತೆ ತೀರ್ಮಾನಿಸಲಾಯಿತು.

| Sl. No. | Particulars | Existing (UG) |
|---|---|---|
| 1 | Upto 1 hour per Class per Examiner | Rs.30/- per candidate Minimum Rs.200/- |
| 2 | Local Conveyance for Internal/External Examiners ( B.Ed., College Faculty/ School Teacher) | Rs.400/- Per day. |

**ಸಾಮಾನ್ಯ ಸಭೆ 2022/4.42**

Centre for Study of Social Exclusion and Inclusive Policy (CSSEIP) ಕೇಂದ್ರದಲ್ಲಿನ ಬೋಧಕರ ಸೇವೆಯನ್ನು ಮುಂದುವರೆಸುವ ಬಗ್ಗೆ.

ಮಾನ್ಯ ಕುಲಪತಿಯವರು ಮಾತನಾಡಿ, Centre for Study of Social Exclusion and Inclusive Policy (CSSEIP) ಕೇಂದ್ರದಲ್ಲಿನ ಬೋಧಕರ ಸೇವೆಯನ್ನು ದಿನಾಂಕ 31–03–2023ರ ವರೆಗೆ ಮುಂದುವರೆಸಲು ಯುಜಿಸಿಯು ಪಬ್ಲಿಕ್ ನೋಟೀಸ್ ಹೊರಡಿಸಿರುತ್ತದೆ ಎಂದು ತಿಳಿಸಿದರು.

ಪ್ರೊ. ರಮೇಶ್‌ರವರು ಮಾತನಾಡಿ, Centre for Study of Social Exclusion and Inclusive Policy (CSSEIP) ಕೇಂದ್ರದಲ್ಲಿ ಡಾ. ಸಿದ್ದರಾಜು.ವಿ.ಜಿ. ರವರು ಜೇಷ್ಠತೆಯಲ್ಲಿ

| | |
|---|---|
| | ಹಿರಿಯರಾಗಿರುತ್ತಾರೆ, ಆದರೆ ಅವರಿಗೆ ಕೇಂದ್ರದ ನಿರ್ದೇಶಕರಾಗುವ ಅವಕಾಶ ತಪ್ಪಿರುತ್ತದೆ. ಕಳೆದ 07 ವರ್ಷಗಳಿಂದ ಡಾ. ನಂಜುಂಡರವರು ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಆದ್ದರಿಂದ ಜೇಷ್ಠತೆಯಲ್ಲಿ ಹಿರಿಯರಾಗಿರುವ ಡಾ. ಸಿದ್ದರಾಜು ವಿ.ಜಿ.ರವರನ್ನು ಕೇಂದ್ರದ ನಿರ್ದೇಶಕರನ್ನಾಗಿ ನೇಮಕ ಮಾಡಬೇಕೆಂದು ಮನವಿ ಮಾಡಿಕೊಂಡರು. ಸದರಿ ಮನವಿಯನ್ನು ಡಾ.ಈ.ಸಿ.ನಿಂಗರಾಜು ಹಾಗೂ ಡಾ, ಚೈತ್ರನಾರಾಯಣರವರು ಸಮ್ಮತಿ ಸೂಚಿಸಿದರು.<br><br>ಡಾ. ನಾಗರಾಜುರವರು ಮಾತನಾಡಿ, ಡಾ. ಡಿ.ಸಿ ನಂಜುಂಡರವರು ಸಹ ಹೆಚ್ಚು ಹೆಚ್ಚು ಪತ್ರಿಕೆಗಳಿಗೆ ಪ್ರಬಂಧ ನೀಡುತ್ತಾರೆ, ಕೇಂದ್ರದಲ್ಲಿ ಅವರು ಸಹ ಹೆಚ್ಚು ಕ್ರಿಯಾಶೀಲರಾಗಿರುತ್ತಾರೆ ಎಂದು ತಿಳಿಸಿದರು.<br><br>ಪ್ರೊ. ವೆಂಕಟೇಶ್‌ಕುಮಾರ್‌ರವರು ಮಾತನಾಡಿ, Centre for Study of Social Exclusion and Inclusive Policy (CSSEIP) ಕೇಂದ್ರಕ್ಕೆ ಎರಡು ವರ್ಷಕೊಮ್ಮೆ ನಿರ್ದೇಶಕರ ಅವಧಿ ನಿಗಧಿ ಪಡಿಸುವುದರಿಂದ ಯಾರಿಗೂ ತೊಂದರೆಯಾಗುವುದಿಲ್ಲ ಎಂದು ತಿಳಿಸಿದರು. |
| **ತೀರ್ಮಾನ** | Centre for Study of Social Exclusion and Inclusive Policy (CSSEIP) ಕೇಂದ್ರದಲ್ಲಿನ ಸಿಬ್ಬಂದಿಗಳ ಸೇವೆಯನ್ನು ಯು.ಜಿ.ಸಿ. ಹೊರಡಿಸಿರುವ ನೋಟಿಸ್‌ನ ಅನುಸಾರ ~~ಹಾಗೂ ಉಪಕುಲಸಚಿವರು, ಅಭಿವೃದ್ಧಿ ಅವರು ತಿಳಿಸಿರುವಂತೆ~~ ವಿಶ್ವವಿದ್ಯಾನಿಲಯದ ಮೇಲೆ ಯಾವುದೇ ರೀತಿಯ ಆರ್ಥಿಕ ಹೊರೆ ಇಲ್ಲದಂತೆ ದಿನಾಂಕ 31.03.2023ರವರೆಗೆ ಮುಂದುವರೆಸಲು ಹಾಗೂ ಡಾ. ಸಿದ್ದರಾಜು ವಿ.ಜಿ.ರವರನ್ನು ನಿರ್ದೇಶಕರನ್ನಾಗಿ ನೇಮಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2022/4.43** | ಸಿಂಡಿಕೇಟ್‌ನ ಉಪಸಮಿತಿಗಳಿಗೆ ನಾಮನಿರ್ದೇಶಿತ ಸದಸ್ಯರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡುವ ಬಗ್ಗೆ ಕೋರಿ. |
| | ಮಾನ್ಯ ಕುಲಪತಿಯವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯ ಸಿಂಡಿಕೇಟ್ ಸಭೆಗಳಲ್ಲಿ ಹಲವು ವಿಷಯಗಳ ಬಗ್ಗೆ ವಿವರವಾಗಿ ಚರ್ಚಿಸಲು ಸಿಂಡಿಕೇಟ್ ಉಪಸಮಿತಿಗಳನ್ನು ರಚಿಸಲಾಗಿದೆ. ಹೆಚ್ಚಿನ ಸಮಿತಿಗಳಲ್ಲಿ ಕೇವಲ ಡೀನ್‌ರನ್ನು ಅಧ್ಯಕ್ಷರನ್ನಾಗಿ ಮಾಡುತ್ತಿರುವುದರಿಂದ ಸದರಿಯವರ ಕಾರ್ಯದ ಒತ್ತಡದಿಂದಾಗಿ ತುರ್ತಾಗಿ ಸಭೆಗಳನ್ನು ಆಯೋಜಿಸುವುದು ಅವರಿಗೆ ಕಷ್ಟವಾಗುತ್ತದೆ. ಈ ಸಂಬಂಧ ಸಿಂಡಿಕೇಟ್ ಉಪಸಮಿತಿಗಳಿಗೆ ರಾಜ್ಯ ಸರ್ಕಾರದಿಂದ ಮತ್ತು ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶನಗೊಂಡಿರುವ ಸದಸ್ಯರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಬೇಕೆಂದು ಡಾ. ಈ.ಸಿ ನಿಂಗರಾಜುರವರು ಕೋರಿರುತ್ತಾರೆ ಎಂದು ಸಭೆಯ ಗಮನಕ್ಕೆ ತಂದರು. |
| **ತೀರ್ಮಾನ** | ಸಿಂಡಿಕೇಟ್‌ನ ಉಪಸಮಿತಿಗಳಿಗೆ ರಾಜ್ಯ ಸರ್ಕಾರದಿಂದ ಮತ್ತು ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶನಗೊಂಡಿರುವ ಸದಸ್ಯರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2022/4.44** | ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಆವರಣದಲ್ಲಿ "ನಂದಿನಿ" ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರಾಟಕ್ಕೆ ಸ್ಥಳ ಮಂಜೂರು ಮಾಡುವ ಬಗ್ಗೆ. |
| | ಮಾನ್ಯ ಕುಲಪತಿಗಳು ಮಾತನಾಡಿ, ಮೈಸೂರು ಜಿಲ್ಲಾ ಹಾಲು ಒಕ್ಕೂಟವು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ, ವಸತಿಗೃಹದಲ್ಲಿ ವಾಸಿಸುವ ಉದ್ಯೋಗಿಗಳಿಗೆ |

| | |
|---|---|
| | ಅನುಕೂಲವಾಗುವ ದೃಷ್ಟಿಯಿಂದ ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಆವರಣದಲ್ಲಿ (ಮಾನಸಗಂಗೋತ್ರಿ ಉಪಹಾರ ಮಂದಿರ ಆವರಣದಲ್ಲಿ ಹಾಗೂ ಎಸ್.ಜಿ.ಸಿ.ಇ ಎದುರುಗಡೆಯಿರುವ ಮುಖ್ಯದ್ವಾರದ ಬಳಿ) ಎರಡು ನಂದಿನಿ ಕ್ಷೀರ ಕೇಂದ್ರವನ್ನು ಸ್ಥಾಪಿಸಲು ಸ್ಥಳಾವಕಾಶ ನೀಡಲು ತಿಳಿಸಿರುತ್ತದೆ.<br>ಡಾ. ಈ.ಸಿ ನಿಂಗರಾಜುರವರು ಮಾತನಾಡಿ, ವಿಶ್ವವಿದ್ಯಾನಿಲಯದ ಆವರಣದಲ್ಲಿ ನಂದಿನಿ ಕ್ಷೀರ ಕೇಂದ್ರ ಎಂದು ಟೀ, ಕಾಫಿಗಳಂತಹ ಪಾನಿಯಗಳನ್ನು ಮಾರಲು ಮುಂದಾಗುತ್ತಾರೆ ಆದ್ದರಿಂದ ವಿಶ್ವವಿದ್ಯಾನಿಲಯದ ನಿಯಮ ಪಾಲಿಸುವಂತೆ ಸೂಚಿಸುವುದು ಒಳ್ಳೆಯದು ಎಂದು ತಿಳಿಸಿದರು. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ಉಪಾಹಾರ ಮಂದಿರದ ಆವರಣದಲ್ಲಿ ಹಾಗೂ ಎಸ್.ಜೆ.ಸಿ.ಇ ಎದುರುಗಡೆಯಿರುವ ಮುಖ್ಯದ್ವಾರದ ಬಳಿ ಈಗಾಗಲೇ ಖಾಲಿ ಇರುವ ಮಳಿಗೆಯಲ್ಲಿ ಎರಡು ಕ್ಷೀರ ಕೇಂದ್ರಗಳನ್ನು "ನಂದಿನಿ" ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರಾಟಕ್ಕೆ ಸ್ಥಳಾವಕಾಶವನ್ನು ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತಕ್ಕೆ ನಿಯಮಾನುಸಾರ ಸ್ಥಳ ಮಂಜೂರು ಮಾಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2022/4.45** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನೂತನವಾಗಿ ಪ್ರಾರಂಭವಾಗಿರುವ ಸ್ಕೂಲ್ ಆಫ್ ಇಂಜಿನಿಯರಿಂಗ್‌ಗೆ ಉಪಕರಣಗಳನ್ನು ಖರೀದಿಸುವ ಬಗೆಗೆ |
| | ಮಾನ್ಯ ಕುಲಪತಿಯವರು ಮಾತನಾಡಿ, ನೂತನವಾಗಿ ಪ್ರಾರಂಭವಾಗಿರುವ ಸ್ಕೂಲ್ ಆಫ್ ಇಂಜಿನಿಯರಿಂಗ್ ಕಾಲೇಜಿಗೆ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ ಹಾಗೂ ಕರ್ನಾಟಕ ಸರ್ಕಾರದ ವತಿಯಿಂದ ಅನುಮೋದನೆ ಪಡೆದಿದ್ದು 2021–22ನೇ ಶೈಕ್ಷಣಿಕ ಸಾಲಿಗೆ ಐದು ವಿಭಾಗಗಳನ್ನು ತೆರೆದು ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಲು ಅತ್ಯಾವಶ್ಯಕವಾಗಿ ಬೇಕಾಗಿರುವಂತಹ 1. Degital Electronics & Micro Controller Lab 2. Computers Lab Setup & Furnishing-180 Machines with software 3. Supply installation and commissioning of software, UPS, Centralized billing equipment's and Materials to various department ಉಪಕರಣಗಳನ್ನು ಖರೀದಿಸಬೇಕಾಗಿದೆ ಇದರ ಒಟ್ಟು ಮೌಲ್ಯ ರೂ. 4.70 ಕೋಟಿಯಾಗಿರುತ್ತದೆ ಎಂದು ಸಭೆಗೆ ತಿಳಿಸಿದರು. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನೂತನವಾಗಿ ಪ್ರಾರಂಭವಾಗಿರುವ ಸ್ಕೂಲ್ ಆಫ್ ಇಂಜಿನಿಯರಿಂಗ್ ಕಾಲೇಜಿಗೆ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್‌ನ ನಿಯಮಾವಳಿಯಂತೆ 2ನೇ ವರ್ಷದಲ್ಲಿ 05 ವಿಭಾಗಗಳನ್ನು ಪ್ರಾರಂಭಿಸಲು ಅತ್ಯಾವಶ್ಯಕವಾಗಿ ಬೇಕಾಗಿರುವಂತಹ ಉಪಕರಣಗಳನ್ನು ರೂ.4.70 ಕೋಟಿಗಳಲ್ಲಿ ಖರೀದಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/4.46** | ಶ್ರೀ ಆರ್. ಪ್ರದೀಪ್ ಕುಮಾರ್ ದೀಕ್ಷಿತ್, ಸಿಂಡಿಕೇಟ್ ಸದಸ್ಯರು ಇವರು ಚಾಮರಾಜನಗರ ಸ್ನಾತಕೋತ್ತರ ಕೇಂದ್ರದ ಅಭಿವೃದ್ಧಿ ಕಾಮಗಾರಿಗಳ ಬಗೆಗಿನ ಮಾಹಿತಿಯನ್ನು ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲು ಕೋರಿರುವ ಬಗ್ಗೆ. |
| | ಸದರಿ ವಿಷಯ ಪ್ರಸ್ತಾಪ ಮಾಡುವ ಮುನ್ನ ಶ್ರೀ. ಆರ್ ಪ್ರದೀಪ್‌ಕುಮಾರ್ ದೀಕ್ಷಿತ್‌ರವರು ಮಾತನಾಡಿ, ನಾನು ನೀಡುವ ವಿಷಯವನ್ನು ಮುಂಚಿತವಾಗಿ ಸದಸ್ಯರಿಗೆ ಯಾಕೆ ನೀಡಿರುವುದಿಲ್ಲ ಮತ್ತು ನಾನು ನೀಡಿರುವ ವಿಷಯವನ್ನು ಟೇಬಲ್ ಅಜೆಂಡಾ ಎಂದು ಸಭೆಯು |

| | |
|---|---|
| | ಪ್ರಾರಂಭವಾಗುವಾಗ ನೀಡಿದರೆ, ಸದಸ್ಯರುಗಳಿಗೆ ಏನು ಅರ್ಥವಾಗುತ್ತದೆ ಹಾಗೂ ಟೇಬಲ್ ಅಜೆಂಡಾ ತರುವ ಅವಶ್ಯಕತೆ ಏನು ಎಂದು ಪ್ರಶ್ನಿಸಿದರು. ನಾನು ಚಾಮರಾಜನಗರ ಜಿಲ್ಲೆಯ ಕಾಮಗಾರಿ ಕುರಿತು ಮಾಹಿತಿ ಕೇಳಿರುತ್ತೇನೆ ಇಲ್ಲಿಯವರೆಗೂ ತಾವು ನೀಡಿರುವುದಿಲ್ಲ. ವಿಶ್ವವಿದ್ಯಾನಿಲಯದ ಕಾರ್ಯವೈಖರಿ ಬಗ್ಗೆ ಅಸಮಾಧಾನವಿದೆ, ಯಾವ ಕಾರ್ಯವೂ ಸಹ ಸರಿಯಾದ ಸಮಯಕ್ಕೆ ಆಗುವುದಿಲ್ಲ ಎಂದು ಸಭೆಗೆ ತಮ್ಮ ಬೇಸರ ವ್ಯಕ್ತಪಡಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ತಾವು ನೀಡುವ ಪತ್ರವನ್ನು ಸಂಬಂಧಿಸಿದ ಉದ್ಯೋಗಿಗಳಿಗೆ ತಲುಪಿಸಿ ಅವರು ಕಡತವನ್ನು ಸಿದ್ದಪಡಿಸುವುದರಲ್ಲಿ ಸಮಯ ತೆಗೆದುಕೊಳ್ಳುತ್ತದೆ ಆದರಿಂದ ಕೆಲವೊಂದು ವಿಷಯಗಳು ಟೇಬಲ್ ಅಜೆಂಡಾ ರೀತಿಯಲ್ಲಿ ವಿಷಯವನ್ನು ತರಲಾಗುತ್ತದೆ ಎಂದು ತಿಳಿಸಿದರು.<br><br>ಪ್ರೊ. ವೆಂಕಟೇಶ್‌ಕುಮಾರ್‌ರವರು ಮಾತನಾಡಿ, ವಿಷಯವನ್ನು ತಡವಾಗಿ ಬರದಂತೆ ನೋಡಿಕೊಳ್ಳುವುದು ಸದಸ್ಯ ಕಾರ್ಯದರ್ಶಿಯವರ ಕರ್ತವ್ಯವಾಗಿರುತ್ತದೆ, ಇದನ್ನು ಕಾರ್ಯನಿರ್ವಾಹಕರ ಮೇಲೆ ಆರೋಪ ಮಾಡುವುದು ಸರಿಯಾದ ಕಾರಣವಲ್ಲ ಎಂದು ತಿಳಿಸಿದರು.<br><br>ಶ್ರೀ ಎಂ.ಬಿ.ಗಪ್ಪಣ್ಣರವರು ಮಾತನಾಡಿ, ಸದಸ್ಯರು ನೀಡಿದ ಪ್ರತಿಯನ್ನು ಎಲ್ಲಾ ಸದಸ್ಯರಿಗೆ ಸಕಾಲದಲ್ಲಿ ತಲುಪಿಸುವ ಪ್ರಯತ್ನ ಮಾಡಬೇಕು ಎಂದು ತಿಳಿಸಿದರು.<br><br>ಶ್ರೀ ಆರ್ ಪ್ರದೀಪ್‌ಕುಮಾರ್ ದೀಕ್ಷಿತ್‌ರವರು ಮಾತನಾಡಿ, ನಾನು ನೀಡುವ ಪತ್ರಗಳಿಗೆ ಈ ರೀತಿಯಾಗುತ್ತದೆ. ಇತರೆ ಪತ್ರಗಳು ತಕ್ಷಣವೇ ಕಾರ್ಯರೂಪಕ್ಕೆ ಬರುತ್ತದೆ ಎಂದು ಆರೋಪಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಕೆಲವೊಂದು ಸಮಯದಲ್ಲಿ ಸಕಾಲದಲ್ಲಿ ಕಡತಗಳು ಮಂಡಿಸುವಲ್ಲಿ ತಡವಾಗಿರುತ್ತದೆ. ಆದ್ದರಿಂದ ಈ ರೀತಿಯಾಗುತ್ತದೆ ಅಷ್ಟೆ ವಿನಃ ಬೇರೆ ಸಮಯದಲ್ಲಿ ಕೆಲಸಗಳು ತುರ್ತಾಗಿಯೇ ನಡೆಯುತ್ತದೆ. ಮುಂದಿನ ಬಾರಿ ಯಾವುದೇ ರೀತಿಯ ಟೇಬಲ್ ಅಜೆಂಡಾ ತರಲಾಗುವುದಿಲ್ಲ, ಅಂತಹ ತುರ್ತು ಪರಿಸ್ಥಿತಿ ಬಂದರೆ ವಿಶೇಷ ಸಿಂಡಿಕೇಟ್ ಸಭೆ ಕರೆಯಲಾಗುತ್ತದೆ ಎಂದು ತಿಳಿಸಿದರು.<br><br>ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸರಿಯಾದ ರೀತಿಯಲ್ಲಿ ಕೆಲಸ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಒಬ್ಬೊಬ್ಬರು ಒಂದೊಂದು ಕ್ಷೇತ್ರದಲ್ಲಿ ಪ್ರವೀಣರಾಗಿರುತ್ತಾರೆ ಅವರ ಜಾಗಕ್ಕೆ ಮತ್ತೊಬ್ಬರನ್ನು ನೇಮಿಸಲು ಹೋದರೆ ಅಲ್ಲಿ ಕೆಲಸಕ್ಕೆ ತೊಂದರೆಯಾಗುತ್ತದೆ ಹಾಗೂ ವಿಶ್ವವಿದ್ಯಾನಿಲಯದಲ್ಲಿ ಯಾವುದೇ ರೀತಿಯ ನೇಮಕಾತಿಗಳು ನಡೆದಿರುವುದಿಲ್ಲ, ಕೆಲವು ತಾತ್ಕಾಲಿಕ ನೌಕರರು ತಮಗೆ ವಹಿಸಿರುವ ಕೆಲಸವನ್ನು ಸರಿಯಾಗಿ ಮಾಡುತ್ತಿಲ್ಲ ಆದ್ದರಿಂದ ಕೆಲಸಗಳಿಗೆ ತೊಂದರೆಯಾಗುತ್ತಿದೆ. ಇದರ ಸಂಬಂಧ ನಿವೃತ್ತ ಸಹಾಯಕ ಕುಲಸಚಿವರು, ಅಧೀಕ್ಷಕರಗಳ ಬಳಿ ನಮ್ಮಲಿರುವ ಅಧ್ಯಾಪಕೇತರ ಉದ್ಯೋಗಿಗಳಿಗೆ ತರಬೇತಿ ನೀಡಲು ಮುಂದಾಗಿದ್ದೇನೆ. ಆದಷ್ಟು ಬೇಗೆ ಹೆಚ್‌ಆರ್‌ಡಿಸಿನಲ್ಲಿ ತರಬೇತಿ ಕಾರ್ಯಕ್ರಮ ಪ್ರಾರಂಭ ಮಾಡುವುದಾಗಿ ಸಭೆಯ ಗಮನಕ್ಕೆ ತಂದರು. |
| ತೀರ್ಮಾನ | ಈ ವಿಷಯವನ್ನು ಮುಂದೂಡಲಾಯಿತು |

| | |
|---|---|
| ಸಾಮಾನ್ಯ ಸಭೆ 2022/4.47 | ಶ್ರೀ ಶಿವಣ್ಣ ಡಿ, ಹಿರಿಯ ಸಹಾಯಕರು ಇವರ ವಿರುದ್ಧ ವಿಶ್ವವಿದ್ಯಾನಿಲಯಕ್ಕೆ ದೂರು ನೀಡಿರುವ ವಿಷಯದ ಕುರಿತು. |
| | ಪ್ರೊ. ರಮೇಶ್, ಡಾ. ಚೈತ್ರನಾರಾಯಣ ಹಾಗೂ ಡಾ. ಈ.ಸಿ.ನಿಂಗರಾಜು ಗೌಡರವರು ಮಾತನಾಡಿ, ಶ್ರೀ ಶಿವಣ್ಣ.ಡಿ. ರವರು ತಮ್ಮ ಮನೆಯ ಮುಂದೆ ಕೋಳಿ ಸಾಕಾಣೆ ಮಾಡುತ್ತಿದ್ದಾರೆ, ಮನೆಯ ಮುಂಭಾಗದ ಗೋಡೆಗೆ ಕಬ್ಬಿಣದ ರಾಡಿನಿಂದ ಗೋಡೆಯನ್ನು ಒಡೆದು ಶೆಡ್‌ನ್ನು ನಿರ್ಮಿಸಿರುತ್ತಾರೆ. ಶೆಡ್‌ನಿಂದ ಅಕ್ಕಪಕ್ಕದ ಮನೆಗಳಿಗೆ ಹೋಗುವುದಕ್ಕೆ ತೊಂದರೆಯಾಗುತ್ತಿದೆ ಎಂದು ಅಕ್ಕಪಕ್ಕ ವಾಸ ಮಾಡುವ ಮನೆಗಳಿಂದ ಸಾಕಷ್ಟು ದೂರುಗಳು ಬಂದಿರುತ್ತದೆ ಹಾಗೂ ಅವರು ತನ್ನ ಪಕ್ಕದ ಮನೆಯ ಆನಂದ್‌ರವರಿಗೆ ರಾಡಿನಿಂದ ಹೊಡೆಯಲು ಹೋಗಿರುತ್ತಾರೆ. ಇದು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿರುತ್ತದೆ ಎಂದು ತಿಳಿಸಿದರು.<br>ಶ್ರೀ ಎಸ್.ಡಿ ದೊಡ್ಡಚಾರಿವರು ಮಾತನಾಡಿ, ಇಂತಹವರನ್ನು ಕೂಡಲೆ ವಸತಿಗೃಹಗಳಿಂದ ತೆಗೆದುಹಾಕಬೇಕು ಹಾಗೂ ಸಮಿತಿ ನೀಡಿರುವ ಸಲಹೆಯಂತೆ ಅವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು. |
| ತೀರ್ಮಾನ | ಶ್ರೀ ಶಿವಣ್ಣ ಡಿ, ಹಿರಿಯ ಸಹಾಯಕರು ಇವರಿಗೆ ಎಚ್ಚರಿಕೆಯ ನೋಟೀಸ್ ನೀಡಿ ವಸತಿಗೃಹ ಖಾಲಿ ಮಾಡಲು ಕ್ರಮ ಕೈಗೊಳ್ಳಬೇಕೆಂದು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2022/4.48 | ಮೈಸೂರು ವಿಶ್ವವಿದ್ಯಾನಿಲಯದ ವಸತಿಗೃಹಗಳ ಹಂಚಿಕೆ ಹಾಗೂ ಲೈಸೆನ್ಸ್ ಶುಲ್ಕ ನಿಗಧಿಪಡಿಸುವ ಸಂಬಂಧದ ಮಾರ್ಗಸೂಚಿ ರಚಿಸುವ ಬಗ್ಗೆ. |
| ತೀರ್ಮಾನ | ಮಾನ್ಯ ಕುಲಪತಿಗಳು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ವಸತಿಗೃಹಗಳ ಹಂಚಿಕೆ ಹಾಗೂ ಲೈಸೆನ್ಸ್ ಶುಲ್ಕ ನಿಗಧಿಪಡಿಸಲು ಹಾಗೂ ಮಾರ್ಗಸೂಚಿಯನ್ನು ರಚಿಸುವ ಸಂಬಂಧ ಸಮಿತಿಯು ನೀಡಿರುವ ವರದಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2022/4.49 | 2021-22ನೇ ಸಾಲಿನ ಆಯವ್ಯಯದಲ್ಲಿ ಮರು ಹೊಂದಾಣಿಕೆ ಮಾಡಿಕೊಂಡಿರುವುದನ್ನು "ಸಿಂಡಿಕೇಟ್"ಸಭೆಯ ಅವಗಾಹನೆ ಮತ್ತು ಅನುಮೋದನೆಗಾಗಿ ಮರು ಮಂಡಿಸುವ ಬಗ್ಗೆ. |
| | ಮಾನ್ಯ ಕುಲಪತಿಯವರು ಮಾತನಾಡಿ ಕಳೆದ ಸಭೆಯಲ್ಲಿ ಸಿಂಡಿಕೇಟ್ ಸದಸ್ಯರು ಮರು ಹೊಂದಾಣಿಕೆ ಮಾಡಿಕೊಂಡಿರುವ ವೆಚ್ಚಗಳ ವಿವರಗಳನ್ನು ಕೋರಿದ್ದು, ಸದಸ್ಯರ ಅವಗಾಹನೆ ಹಾಗೂ ಅನುಮೋದನೆಗೆ ಮರು ಮಂಡಿಸಲಾಗಿದೆ ಎಂದು ತಿಳಿಸಿದರು.<br>ಹಣಕಾಸು ಅಧಿಕಾರಿಯವರು ಮರು ಹೊಂದಾಣಿಕೆ ಮಾಡಿಕೊಂಡಿರುವ ವಿವರವನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿದರು. |
| ತೀರ್ಮಾನ | 2021-22ನೇ ಸಾಲಿನ ಆಯವ್ಯಯದಲ್ಲಿ ಮರು ಹೊಂದಾಣಿಕೆ ಮಾಡಿಕೊಂಡಿರುವುದನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |

| ಇತರೆ ವಿಷಯಗಳು | |
|---|---|
| 01 | ಪ್ರೊ. ರಮೇಶ್‌ರವರು ಮಾತನಾಡಿ, ಅಧ್ಯಾಪಕರುಗಳ ಕೆಲಸ ವೈಖರಿಗಳ ಬಗ್ಗೆ ತಿಳಿಯಲು ವಿದ್ಯಾರ್ಥಿಗಳಿಂದ ಫೀಡ್‌ಬ್ಯಾಕ್ ಪಡೆದು ವಿಭಾಗಗಳು ಹೇಗೆ ನಡೆಯುತ್ತಿದೆ ಎಂದು ಅಭಿಪ್ರಾಯ ತೆಗೆದುಕೊಳ್ಳುವುದು ಒಳ್ಳೆಯದು ಎಂದು ಸಭೆಯ ಗಮನಕ್ಕೆ ತಂದರು. |

| | |
|---|---|
| 02 | ಶ್ರೀ ಎಂ.ಬಿ.ಗಪ್ಪಣ್ಣರವರು ಮಾತನಾಡಿ, ಮಾನಸಗಂಗೋತ್ರಿ ಆವರಣದಲ್ಲಿ ಶೌಚಾಲಯಗಳು ದುರ್ವಾಸನೆಗಳಿಂದ ಕೂಡಿರುತ್ತದೆ ಹಾಗೂ ಕುಡಿಯುವ ನೀರಿನ ಸೌಲಭ್ಯಗಳು ಲಭ್ಯವಿಲ್ಲದಿರುವುದು ಕಂಡುಬಂದಿರುತ್ತದೆ ದಯಮಾಡಿ ಶೌಚಾಲಯಗಳನ್ನು ಸ್ವಚ್ಛವಾಗಿಡಲು ಹಾಗೂ ನೀರಿನ ಸೌಲಭ್ಯಗಳು ಒದಗಿಸಬೇಕಾಗಿ ಹಾಗೂ ಇಂಜಿನಿಯರಿಂಗ್ ಕಾಲೇಜಿನ ಸಮಿತಿಗಳಿಗೆ ಸಿಂಡಿಕೇಟ್ ಸದಸ್ಯರನ್ನು ನಾಮ ನಿರ್ದೇಶನ ಮಾಡಿ ಎಂದು ಮಾನ್ಯ ಕುಲಪತಿಯವರಲ್ಲಿ ಕೋರಿದರು. |
| 03 | ಶ್ರೀ ಆರ್.ಪ್ರದೀಪ್ ಕುಮಾರ್ ದೀಕ್ಷಿತ್‌ರವರು ಮಾತನಾಡಿ ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶಕರ ಬದಲಾವಣೆ ಹಾಗೂ ಇಂಜಿನಿಯರಿಂಗ್ ಕಾಲೇಜಿಗೆ ಸಂಬಂಧಿಸಿದಂತೆ ಮಾಹಿತಿ ನೀಡಿ ಎಂದು ಮಾನ್ಯ ಕುಲಪತಿಯವರಲ್ಲಿ ಮನವಿ ಮಾಡಿದರು.<br><br>ಶ್ರೀ ಆರ್.ಪ್ರದೀಪ್ ಕುಮಾರ್ ದೀಕ್ಷಿತ್‌ರವರು ಮಾತನಾಡಿ, ಹಿಂದಿನ ಸಭೆಯಲ್ಲಿ ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶಕರ ಬದಲಾವಣೆಯ ಕುರಿತು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ವಿಡಿಯೋ ಸಮೇತ ಮಂಡಿಸಲಾಗುವುದು ಎಂದು ಹೇಳಿದಿರಿ ಇಂದಿನ ಸಭೆಯಲ್ಲಿ ದಾಖಲೆಗಳಾಗಲಿ ಅಥವಾ ವಿಡಿಯೋವಾಗಲಿ ಸಲ್ಲಿಸಿರುವುದಿಲ್ಲ ಎಂದು ಮಾನ್ಯ ಕುಲಪತಿಯವರನ್ನು ಪ್ರಶ್ನಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಪದೇ ಪದೇ ವಿದ್ಯಾರ್ಥಿಗಳು ಧರಣಿಯನ್ನು ಹೂಡುತ್ತಿದ್ದರು ಹಿಂದಿನ ಡೀನರು ಧರಣಿಯನ್ನು ನಿಲ್ಲಿಸುವ ಪ್ರಯತ್ನವನ್ನು ಮಾಡುತ್ತಿರಲಿಲ್ಲ. ಎಲ್ಲಾ ಕೆಲಸಗಳನ್ನು ಬಿಟ್ಟು ಧರಣಿಯನ್ನು ನಿಲ್ಲಿಸುವುದಕ್ಕೆ ತಾವು ತೆರಳುತ್ತಿದ್ದೆವು. ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿದ್ದರಿಂದ ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ಹಿತದೃಷ್ಟಿಯಿಂದ ಅವರನ್ನು ಬದಲಾವಣೆ ಮಾಡಿ ಪ್ರೊ.ಗುರುಸಿದ್ದಯ್ಯ. ಸಿ, ಪ್ರಾಧ್ಯಾಪಕರು, ಇತಿಹಾಸ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಪ್ರಭಾರ ನಿರ್ದೇಶಕರಾಗಿ ನಿಯೋಜನೆ ಆಧಾರದ ಮೇಲೆ ಕಾರ್ಯನಿರ್ವಹಿಸಲು ಆದೇಶಿಸಲಾಗಿದೆ ಎಂದು ಸಭೆಗೆ ತಿಳಿಸಿದರು.<br><br>ಶ್ರೀ ಪ್ರದೀಪ್ ಕುಮಾರ್ ದೀಕ್ಷಿತ್‌ರವರು ಮಾತನಾಡಿ ಏಕಾಏಕಿ ಬದಲಾವಣೆ ಮಾಡಿಲ್ಲ ಎಂದು ತಿಳಿಸಿದ್ದೀರಿ? ಹಣಕಾಸಿನ ದುರ್ಬಳಕೆಯಾಗಿದೆ, ಪ್ರೊ. ರಮೇಶ್‌ರವರು ಸಮಿತಿಯಲ್ಲಿ ಇದ್ದಾರೆ, ಪ್ರೊ.ರಾಮಚಂದ್ರರವರನ್ನು ಕರೆಸಿ ಸಮಿತಿಯಲ್ಲಿ ಅವರನ್ನು ವಿಚಾರಿಸಿ ಎಂದು ಮಾನ್ಯ ಕುಲಪತಿಯವರಲ್ಲಿ ಕೋರಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ ಸಮಿತಿಯ ಅಧ್ಯಕ್ಷರಾದ ಪ್ರೊ. ರಮೇಶ್‌ರವರಿಗೆ ದಿನಾಂಕ 12-5-2022ರ ಒಳಗೆ ಒಂದು ಸಭೆಯನ್ನು ಏರ್ಪಾಡಿಸಿ ಪ್ರೊ. ರಾಮಚಂದ್ರರವನ್ನು ವಿಚಾರಣೆಗೆ ಒಳಪಡಿಸಬೇಕೆಂದು ಸೂಚಿಸಿದರು. |

ಅಂತಿಮವಾಗಿ ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ, ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕಾರ ಹಾಗೂ ಸಲಹೆಗಳನ್ನು ನೀಡಿರುವ ಎಲ್ಲಾ ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿ

ಕುಲಪತಿಗಳು ಮತ್ತು ಅಧ್ಯಕ್ಷರು